ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಮ್. ನಾಗಪ್ರಸನ್ನ

ಅಶೋಕ್ ಕುಮಾರ್ -ವಿರುದ್ಧ ಕರ್ನಾಟಕ ಸರ್ಕಾರ ಮತ್ತು ಇತರರು*

ರಿಟ್ ಅರ್ಜಿಸಂಖ್ಯೆ: 205496/2019 (ಎಸ್-ಕೆಎಟಿ), ದಿನಾಂಕ 7 ನೇ ಫೆಬ್ರುವರಿ, 2020

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಮ್. ನಾಗಪ್ರಸನ್ನ:

ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು, ಅರ್ಜಿಸಂಖ್ಯೆ: 4005/2010 ರಲ್ಲಿದಿನಾಂಕ: 24.10.2019 ರಂದು ಹೊರಡಿಸಿದ ಆದೇಶದಲ್ಲಿ, ಸಹಾಯಕ ಸರ್ಕಾರಿ ಅಭಿಯೋಜಕರು (ಪ್ರಾಸಿಕ್ಯೂಟರ್) ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿ (ಫೀಡರ್) ಹುದ್ದೆಗೆ 3 ನೇ ಪ್ರತಿವಾದಿಗಳ ನೇಮಕಾತಿಯನ್ನು ರದ್ದುಗೊಳಿಸಿ, ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸಿ, ತತ್ಪರಿಣಾಮವಾಗಿ, ಅರ್ಜಿದಾರರ ಮೊಕದ್ದಮೆಯನ್ನು ನೇಮಕಾತಿಗಾಗಿ ಪರಿಗಣಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.ಅದರಿಂದ ಬಾಧಿತರಾಗಿ ಅದರಲ್ಲಿನ 3 ನೇ ಪ್ರತಿವಾದಿಯು ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

2. ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ (ಸಂಕ್ಷಿಪ್ತವಾಗಿ ' ನ್ಯಾಯ ಮಂಡಳಿ ') ಮುಂದಿನ ಅರ್ಜಿಯಲ್ಲಿರುವ ಪಕ್ಷಕಾರರ ಬ್ಯಾಂಕಿಂಗ್ ಪ್ರಕಾರ ಅವರನ್ನು ಉಲ್ಲೇಖಿಸಲಾಗುವುದು.

3. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ:

2 ನೇ ಪ್ರತಿವಾದಿ-ಅಭಿಯೋಜನೆ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರು, ಅನುಸೂಚಿತ ಜಾತಿಗಳಿಗಾಗಿ ಮೀಸಲಿರಿಸಿದ ಕೋಟಾದ ಅಡಿಯಲ್ಲಿ 144 ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿಗಳ (ಸಂಕ್ಷಿಪ್ತವಾಗಿ ' ಎಪಿಪಿ-ಮತ್ತು-ಎಜಿಪಿ) ಹುದ್ದೆಗಳಿಗೆ ನೌಕರಿಭರ್ತಿ ಸಂಬಂಧದಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದಿನಾಂಕ: 18.06.2009 ರಂದು ನೌಕರಿಭರ್ತಿ ಅಧಿಸೂಚನೆಯನ್ನು ಹೊರಡಿಸಿತ್ತು.ಅರ್ಜಿದಾರರು ಮತ್ತು 3 ನೇ ಪ್ರತಿವಾದಿಗಳಿಬ್ಬರೂ ಸದರಿ ಹುದ್ದೆಯ ಪರಿಗಣನೆಗೆ ಅವರು ಅರ್ಹರೆಂದು ಕಂಡುಬಂದದ್ದರಿಂದ ಅರ್ಜಿಯನ್ನು ಸಲ್ಲಿಸಿದ್ದರು.ಅರ್ಜಿಗಳನ್ನು ಪರಿಶೀಲಿಸಿದ ತರುವಾಯ,ದಿನಾಂಕ: 7.11.2009 ರಂದು ಮತ್ತುದಿನಾಂಕ: 8.11.2009 ರಂದು ಲಿಖಿತ ಪರೀಕ್ಷೆಗಳನ್ನು ನಡೆಸಲಾಯಿತು.ಆ ತರುವಾಯ, ಸಂದರ್ಶನ/ಮೌಖಿಕ ಪರೀಕ್ಷೆ ನಡೆಸಲಾಯಿತು.

4. ಸಂದರ್ಶನ/ಮೌಖಿಕ ಪರೀಕ್ಷೆ ನಡೆಸಿದ ನಂತರ, ಅಭ್ಯರ್ಥಿಗಳ ಪಟ್ಟಿಯನ್ನು ಮತ್ತು ಲಿಖಿತ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಗಳೆರಡರಲ್ಲೂ ಅವರು ಪಡೆದ ಒಟ್ಟು ಅಂಕಗಳನ್ನು, 2 ನೇ ಪ್ರತಿವಾದಿಗಳು ಅನುಬಂಧ- ಎ 2 ರ ಪ್ರಕಾರ ಅಧಿಸೂಚಿಸಿದ್ದರು.ಎಲ್ಲಾ ಅಭ್ಯರ್ಥಿಗಳು ಪಡೆದ ಅಂಕಗಳ ಸದರಿ ಅಧಿಸೂಚನೆಯ ನಿಬಂಧನೆಗಳನುಸಾರ, ಅರ್ಜಿದಾರರು ಕ್ರಮಸಂಖ್ಯೆ: 281 ರಲ್ಲಿದ್ದರು ಮತ್ತು ಅವರ ಅಂಕಗಳನ್ನು 86.20 ಎಂದು ತೋರಿಸಲಾಗಿತ್ತು.ಅದರಂತೆ, 3 ನೇ ಪ್ರತಿವಾದಿಗಳು ಕ್ರಮಸಂಖ್ಯೆ: 691 ರಲ್ಲಿದ್ದು, ಅವರ ಅಂಕಗಳನ್ನು 84.40

ಎಂದು ತೋರಿಸಲಾಗಿತ್ತು.ಸದರಿ ಅಂಕ ಪಟ್ಟಿಯ ಅಧಿಸೂಚನೆಗೆ ಅನುಗುಣವಾಗಿ,ದಿನಾಂಕ: 12.4.2010 ರಂದು 2 ನೇ ಪ್ರತಿವಾದಿಗಳು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಅಧಿಸೂಚಿಸಿದ್ದರು.ಆಶ್ಚರವೆಂದರೆ, ಸದರಿ ಆಯ್ಕೆ ಪಟ್ಟಿಯಲ್ಲಿ ಅರ್ಜಿದಾರರ ಹೆಸರು ಕಂಡುಬಂದಿರಲಿಲ್ಲ, ಆದರೆ 3 ನೇ ಪ್ರತಿವಾದಿಗಳ ಹೆಸರನ್ನು ಕ್ರಮಸಂಖ್ಯೆ: 130 ರಲ್ಲಿ ತೋರಿಸಲಾಗಿತ್ತು ಹಾಗೂ ಪ್ರಾರಂಭದಲ್ಲಿ ಅಂಕಗಳನ್ನು ಅಧಿಸೂಚಿಸಿದ್ದಾಗ ಪ್ರಕಟಿಸಿದ್ದಂಥ 84.40 ಅಂಕಗಳಿಗೆ ಬದಲಾಗಿ 87.40 ಎಂದು ತೋರಿಸಲಾಗಿತ್ತು.

5. ಅರ್ಜಿದಾರರು, 3 ನೇ ಪ್ರತಿವಾದಿಗಳು 84.40 ಅಂಕಗಳನ್ನು ಮಾತ್ರ ಪಡೆದಿದ್ದರೆಂದು ಮತ್ತು ಅರ್ಜಿದಾರರು 86.20 ಅಂಕಗಳನ್ನು ಪಡೆದಿದ್ದರೆಂದು ವಾದಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಯನ್ನು ಸಲ್ಲಿಸಿದ್ದರು.ಈ ಅಂಕಗಳು ಲಿಖಿತ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಗಳೆರಡರ ಸಂಯೋಜಿತ ಅಂಕಗಳಾಗಿದ್ದವು.ಆದರೆ,ದಿನಾಂಕ: 12.4.2010 ರಂದು 2 ನೇ ಪ್ರತಿವಾದಿಗಳು ಅಧಿಸೂಚಿಸಿದ್ದಂಥ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ, 87.40 ಕ್ಕೆ ಹೆಚ್ಚಿಸಿದ ಅಂಕಗಳ ಸಹಿತ 3 ನೇ ಪ್ರತಿವಾದಿಗಳ ಹೆಸರನ್ನು ಬಿಂಬಿಸಲಾಗಿತ್ತು.

ಅರ್ಜಿದಾರರ ಮನವಿಯನ್ನು/ ಆಕ್ಷೇಪಣೆಯನ್ನು ಪರಿಗಣಿಸಲಿಲ್ಲ ಮತ್ತು ಆ ದೂರಿನ ಪರಿಹಾರಕ್ಕಾಗಿ ಅರ್ಜಿದಾರರು ಈ ಮುಂದಿನ ಮನವಿಯೊಂದಿಗೆ, ಅಂದರೆ-

(i)ದಿನಾಂಕ: 18.6.2009 ರ ನೌಕರಿಭರ್ತಿ ಅಧಿಸೂಚನೆಯ ಅನುಸರಣೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು-ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿಯ ಹುದ್ದೆಗಳ ಆಯ್ಕೆ ಮತ್ತು ನೇಮಕಾತಿಗೆ ಸಂಬಂಧಿಸಿದ ದಾಖಲೆಗಳನ್ನು ತರಿಸಿಕೊಳ್ಳಲು;

(ii) ಅನುಸೂಚಿತ ಜಾತಿ ಪ್ರವರ್ಗದ ಅಡಿಯಲ್ಲಿ ತಾತ್ಕಾಲಿಕ ಮತ್ತು ಅಂತಿಮ ಆಯ್ಕೆ ಪಟ್ಟಿಯಲ್ಲಿ ಅರ್ಜಿದಾರರ ಹೆಸರನ್ನು ಸೇರಿಸುವ ಮೂಲಕ ಸಹಾಯಕ ಸರ್ಕಾರಿ ಅಭಿಯೋಜಕರು-ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿಯ ಹುದ್ದೆಗೆ ಅವರ ಆಯ್ಕೆ ಮತ್ತು ನೇಮಕಕ್ಕೆ 1 ನೇ ಮತ್ತು 2 ನೇ ಪ್ರತಿವಾದಿಗಳಿಗೆ ನಿರ್ದೇಶಿಸಲು D ಹಾಗೂ ನೇಮಕಾತಿ ಆದೇಶವನ್ನು ಹೊರಡಿಸಲು ಮತ್ತು ಅವರಿಗೆ ತತ್ಪರಿಣಾಮದ ಎಲ್ಲಾ ಪ್ರಯೋಜನಗಳನ್ನು ನೀಡಲು;

(iii)ದಿನಾಂಕ: 12.4.2010 ರ ತಾತ್ಕಾಲಿಕ ಆಯ್ಕೆ ಪಟ್ಟಿಯ ಕ್ರಮಸಂಖ್ಯೆ: 130 ರ ಮೂಲಕ ಸದರಿ ಹುದ್ದೆಗೆ 3 ನೇ ಪ್ರತಿವಾದಿಯ ಆಯ್ಕೆಯನ್ನು ರದ್ದು ಪಡಿಸಿ, ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸುವ ಮೊದಲು ಅನುಬಂಧ-ಎ -5 ರ ಮೂಲಕ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಅರ್ಜಿದಾರರು ಸಲ್ಲಿಸಿದದಿನಾಂಕ: 18.06.2010 ರ ಆಕ್ಷೇಪಣೆಗಳನ್ನು ಪರಿಗಣಿಸಿ, ವಿಲೆ ಮಾಡಲು 2 ನೇ ಪ್ರತಿವಾದಿಗಳಿಗೆ ನಿರ್ದೇಶಿಸಲು,

ಕೋರಿ ಅರ್ಜಿಸಂಖ್ಯೆ: 4005/2010 ರಲ್ಲಿ ನ್ಯಾಯ ಮಂಡಳಿಯನ್ನು ಸಂಪರ್ಕಿಸಿದ್ದರು.

6. ನ್ಯಾಯ ಮಂಡಳಿಯು, ಎಲ್ಲ ಸಾಕ್ಷ್ಯವನ್ನು ಮತ್ತು ಅದರ ಮುಂದೆ ಮಂಡಿಸಿದ ವಾದಗಳನ್ನು ಪರಿಗಣಿಸಿದ ನಂತರ, ಪರ್ಯಾಲೋಚನೆಗಾಗಿ ಈ ಮುಂದಿನ ಅಂಶಗಳನ್ನು ರೂಪಿಸಿದೆ:

(i) ಸಹಾಯಕ ಸರ್ಕಾರಿ ಅಭಿಯೋಜಕರು-ಮತ್ತು-ಸಹಾಯಕ ಸರ್ಕಾರಿ ನ್ಯಾಯವಾದಿಯ ಹುದ್ದೆಗೆ ಅರ್ಜಿದಾರರ ಆಯ್ಕೆಯನ್ನು ಮತ್ತು ನೇಮಕಾತಿಯನ್ನು ನಿರಾಕರಿಸುವಲ್ಲಿ ಅನ್ಯಾಯವಾಗಿದೆಯೇ?ಹಾಗಿದ್ದರೆ ಅವರು ಯಾವ ಪರಿಹಾರಕ್ಕೆ ಅರ್ಹರಾಗಿರುವರು?

(ii) 3 ನೇ ಪ್ರತಿವಾದಿಯ ಆಯ್ಕೆಯಲ್ಲಿ ನಮ್ಮ ಹಸ್ತಕ್ಷೇಪದ ಅಗತ್ಯವಿದೆಯೇ?

7. ಸದರಿ ಅಂಶಗಳಿಗೆ ನೀಡಿದ ಉತ್ತರದಲ್ಲಿ ನ್ಯಾಯ ಮಂಡಳಿಯು, 3 ನೇ ಪ್ರತಿವಾದಿಯ ಆಯ್ಕೆಯನ್ನು ರದ್ದುಗೊಳಿಸಿದೆ ಮತ್ತು ಸಹಾಯಕ ಸರ್ಕಾರಿ ಅಭಿಯೋಜಕರು-ಮತ್ತು-ಸಹಾಯಕ ಸರ್ಕಾರಿ ನ್ಯಾಯವಾದಿಯ ಹುದ್ದೆಗೆ 3 ನೇ ಪ್ರತಿವಾದಿಯ ಇಡೀ ನೇಮಕಾತಿ ಪ್ರಕ್ರಿಯೆಯು, ಆಯ್ಕೆ ಪ್ರಾಧಿಕಾರವು ಎಸಗಿದ ವ್ಯವಸ್ಥಿತ ಮೋಸದ ಕಾರಣದಿಂದಾಗಿತ್ತೆಂಬ ಕಾರಣದ ಮೇಲೆ ಸಹಾಯಕ ಸರ್ಕಾರಿ ಅಭಿಯೋಜಕರು-ಮತ್ತು-ಸಹಾಯಕ ಸರ್ಕಾರಿ ನ್ಯಾಯವಾದಿಯ ಹುದ್ದೆಗೆ ಅರ್ಜಿದಾರರ ಹೆಸರನ್ನು ಪರಿಗಣಿಸಲು ನಿರ್ದೇಶಿಸಿತ್ತು.ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯ ಮಂಡಳಿಯ ಮುಂದೆ ಹಾಜರುಪಡಿಸಿರಲಿಲ್ಲ.ಕಡಿಮೆ ಅಂಕಗಳನ್ನು ಗಳಿಸಿದ್ದಂಥ 3 ನೇ ಪ್ರತಿವಾದಿಯನ್ನು ಸದರಿ ಹುದ್ದೆಗೆ ನೇಮಕ ಮಾಡಬಾರದಿತ್ತು ಮತ್ತು ಅರ್ಜಿದಾರರು ಅರ್ಹತೆಯಲ್ಲಿ ಮೇಲಿದ್ದದ್ದರಿಂದ ನೇಮಕಗೊಳ್ಳಲು ಯೋಗ್ಯರಾಗಿದ್ದರೆಂದು ಸಹ ನ್ಯಾಯ ಮಂಡಳಿಯು ಅಭಿಪ್ರಾಯಪಟ್ಟಿತ್ತು.1 ನೇ ಪ್ರತಿವಾದಿ-ರಾಜ್ಯ ಸರ್ಕಾರವು ಅರ್ಜಿದಾರರಿಗೆ ಸಂದಾಯ ಮಾಡಬೇಕಾದ 10.00 ಲಕ್ಷ ರೂ.ಗಳ ಪರಿಹಾರ ಮೊತ್ತವನ್ನು ನಿರ್ಧರಿಸಿ ಐತೀರ್ಪನ್ನು ಸಹ ನೀಡಿತ್ತು ಮತ್ತು ಇದಲ್ಲದೆ, ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿಯ ಹುದ್ದೆಗೆ ಅರ್ಜಿದಾರರು ನೇಮಕಗೊಳ್ಳಬೇಕೆಂಬುದನ್ನು ಪರಿಗಣಿಸಲು ಅರ್ಹರಾಗಿದ್ದರೆಂದು ಘೋಷಿಸಿತ್ತು.

8. ನ್ಯಾಯ ಮಂಡಳಿಯ ಆದೇಶವನ್ನು ಹೀಗೆ ಓದಲಾಗಿದೆ:

(i) ಅರ್ಜಿಯನ್ನು ಪುರಸ್ಕರಿಸಲಾಗಿದೆ.2 ನೇ ಪ್ರತಿವಾದಿಗಳ ಕಡತದಲ್ಲಿರುವ ಅನುಬಂಧ- ಎ -3 ರಲ್ಲಿರುವ ಅಧಿಸೂಚನೆಸಂಖ್ಯೆ: ಡಿಪಿಎನ್/ಆರ್ಸಿ -01/2008-09,ದಿನಾಂಕ: 12.4.2010 ರ ಪ್ರಕಾರ ಪ್ರಕಟಿಸಲಾದ ಸಹಾಯಕ ಸರ್ಕಾರಿ ಅಭಿಯೋಜಕರು -ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿಯ ಹುದ್ದೆಗೆ ತಾತ್ಕಾಲಿಕ ಆಯ್ಕೆ ಪಟ್ಟಿಯ ಪ್ರಕಾರ (ನೋಡಿ ಕ್ರಮಸಂಖ್ಯೆ: 130) 3 ನೇ ಪ್ರತಿವಾದಿಯ ತಾತ್ಕಾಲಿಕ ಆಯ್ಕೆ ಹಾಗೂ ಅನುಬಂಧ-ಆರ್ -1 ರಲ್ಲಿರುವಸಂಖ್ಯೆ: ಡಿಪಿಎನ್.ಆರ್ಸಿ-01.2008-09ನ್ನು ಹೊಂದಿರುವದಿನಾಂಕ: 26.10.2010 ರ ಅಧಿಸೂಚನೆ ಪ್ರಕಾರ ಸದರಿ ಹುದ್ದೆಗೆ ಅವರ ಅಂತಿಮ ಆಯ್ಕೆ (ನೋಡಿ ಕ್ರಮಸಂಖ್ಯೆ: 130) ಎರಡನ್ನೂ ರದ್ದುಗೊಳಿಸಲಾಗಿದೆ.ತತ್ಪರಿಣಾಮವಾಗಿ,ದಿನಾಂಕ: 30.10.2010 ರ ಆದೇಶದ ಪ್ರಕಾರ ಆಗಿದ್ದ ಸಹಾಯಕ ಸರ್ಕಾರಿ ಅಭಿಯೋಜಕರು-ಮತ್ತು-ಸಹಾಯಕ ಸರ್ಕಾರಿ ನ್ಯಾಯವಾದಿಯಾಗಿ 3 ನೇ ಪ್ರತಿವಾದಿಗಳ ನೇಮಕಾತಿಯು ಶೂನ್ಯವಾಗಿದೆ.

(ii) ಈ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳ ಒಳಗಾಗಿ ಸಹಾಯಕ ಸರ್ಕಾರಿ ಅಭಿಯೋಜಕರು-ಮತ್ತು-ಸಹಾಯಕ ಸರ್ಕಾರಿ ನ್ಯಾಯವಾದಿಯ ಹುದ್ದೆಗೆ ಅರ್ಜಿದಾರರ ಅಭ್ಯರ್ಥಿತನವನ್ನು ಪರಿಗಣಿಸಲು 1 ನೇ ಮತ್ತು 2 ನೇ ಪ್ರತಿವಾದಿಗಳಿಗೆ ನಿರ್ದೇಶಿಸಲಾಗಿದೆ.

(iii) ಈ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳ ಒಳಗಾಗಿ ಅರ್ಜಿದಾರರಿಗೆ ಪರಿಹಾರದ ಮೊತ್ತ ಹಾಗೂ ವೆಚ್ಚಗಳೆರಡನ್ನು ಒಳಗೊಂಡು 10.00 ಲಕ್ಷ ರೂ.ಗಳಷ್ಟು ಮೊತ್ತವನ್ನು ಸಂದಾಯ ಮಾಡಲು ಸಹ 1 ನೇ ಪ್ರತಿವಾದಿಗಳಿಗೆ ನಿರ್ದೇಶಿಸಲಾಗಿದೆ.

(iv) ಸಹಾಯಕ ಸರ್ಕಾರಿ ಅಭಿಯೋಜಕರು-ಮತ್ತು-ಸಹಾಯಕ ಸರ್ಕಾರಿ ನ್ಯಾಯವಾದಿ ಪ್ರವರ್ಗದಲ್ಲಿ ಅರ್ಜಿದಾರರ ಜೇಷ್ಠತೆಯು, ಅವರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಇರತಕ್ಕದ್ದು.

9. ನ್ಯಾಯ ಮಂಡಳಿಯ ಮೇಲೆ-ಉದ್ಧೃತ ಆದೇಶದಿಂದ ಬಾಧಿತರಾಗಿ ನೇಮಕಾತಿ ಹೊಂದಿದ 3 ನೇ ಪ್ರತಿವಾದಿಗಳು ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

10. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ವಿಲಾಸ್ ಕುಮಾರ್ ಮಾರ್ತಾಂಡ ರಾವ್, 1 ನೇ ಮತ್ತು 2 ನೇ ಪ್ರತಿವಾದಿಗಳ ಪರ ಹಾಜರಾದ ಮಾನ್ಯ ಸರ್ಕಾರಿ ವಕೀಲರಾದ ಶ್ರೀಮತಿ ಅನುರಾಧಾ ಎಮ್. ದೇಸಾಯಿ ಹಾಗೂ 3 ನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿ ಶ್ರೀ ಆರ್. ಪದ್ಮನಾಭ ಇವರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ತ್ಯಾಗರಾಜ ಎಸ್. ಇವರ ವಾದಗಳನ್ನು ನಾವು ಆಲಿಸಿದೆವು.

11. 3 ನೇ ಪ್ರತಿವಾದಿಗಳ ನೇಮಕಾತಿಗೆ ಸಂಬಂಧಪಡುವಷ್ಟರಮಟ್ಟಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ರದ್ದುಗೊಳಿಸುವಲ್ಲಿ, ಅಲ್ಲದೆ ಎರಡು ತಿಂಗಳೊಳಗಾಗಿ ಸಹಾಯಕ ಸರ್ಕಾರಿ ಅಭಿಯೋಜಕರು-ಮತ್ತು-ಸಹಾಯಕ ಸರ್ಕಾರಿ ನ್ಯಾಯವಾದಿ ಹುದ್ದೆಗೆ ಅರ್ಜಿದಾರರ ಅಭ್ಯರ್ಥಿತನವನ್ನು ಪರಿಗಣಿಸಬೇಕೆಂದು ನಿರ್ದೇಶಿಸುವಲ್ಲಿ ಮತ್ತು ಇತರ ತತ್ಪರಿಣಾಮದ ನಿರ್ದೇಶನಗಳನ್ನು ನೀಡುವಲ್ಲಿ ನ್ಯಾಯ ಮಂಡಳಿಯು ತಪ್ಪೆಸಗಿದೆ; ಅಂಕಗಳ ಬದಲಾವಣೆಯು ಮುದ್ರಣ ತಪ್ಪಿನ ಸರಿಪಡಿಕೆ ಮಾತ್ರವಾಗಿರುವುದರಿಂದ, ಆಯ್ಕೆ ಪ್ರಾಧಿಕಾರವು ವ್ಯವಸ್ಥಿತವಾಗಿ ಎಸಗಿದ ಮೋಸದ ಕಾರಣದಿಂದ 3 ನೇ ಪ್ರತಿವಾದಿಗಳ ನೇಮಕಾತಿ ಮಾಡಲಾಗಿತ್ತು ಎಂಬ ನ್ಯಾಯ ಮಂಡಳಿಯ ನಿರ್ಣಯಕ್ಕೆ ಯಾವುದೇ ಆಧಾರವಿಲ್ಲ ಹಾಗೂ ಅದು ಹಾಗಾಗಿದ್ದರೂ ಸಹ, ಆಯ್ಕೆ ಪ್ರಾಧಿಕಾರವು ಮೋಸದಲ್ಲಿ ತೊಡಗಿತ್ತೆಂದು ಆರೋಪಿಸಬಹುದಾಗಿದ್ದು, ಅದರಲ್ಲಿ 3 ನೇ ಪ್ರತಿವಾದಿಗಳು ಯಾವುದೇ ರೀತಿಯಲ್ಲೂ ಹೊಣೆಗಾರರಾಗಿರಲಿಲ್ಲ ಮತ್ತು ಅವರು ಆಯ್ಕೆ ಪ್ರಕ್ರಿಯೆಯಲ್ಲಿ ನಿರಪರಾಧಿ ಪಾಲುದಾರ ಮಾತ್ರ ಆಗಿದ್ದರೆಂದು 3 ನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು ವಾದಿಸಿರುವರು.

12. ಇದಲ್ಲದೆ, ಹತ್ತು ವರ್ಷಗಳ ಹಿಂದೆ 3 ನೇ ಪ್ರತಿವಾದಿಗಳು ಆಯ್ಕೆಗೊಂಡ 0 ಹಿನ್ನೆಲೆಯಲ್ಲಿ, ಸಮಾನತೆಯ ಆಧಾರದ ಮೇಲೆ ನೇಮಕಾತಿಯಾಗಿರುವುದರಲ್ಲಿ ಅವರ ತಪ್ಪೇನೂ ಇಲ್ಲದಿರುವುದರಿಂದ ಅವರ ನೇಮಕಾತಿಗೆ ಅಡ್ಡಿಯುಂಟು ಮಾಡಬಾರದೆಂದು ಹಾಗೂ ನೇಮಕಾತಿಯು ವ್ಯವಸ್ಥಿತ ಮೋಸವೆಂಬ ಆಧಾರದ ಮೇಲೆ ಅದನ್ನು ರದ್ದುಗೊಳಿಸುವುದನ್ನು ಅವರ ಮೇಲೆ ಆರೋಪಿಸಲಾಗುವುದಿಲ್ಲವೆಂದು 3 ನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ.

ಮಾನ್ಯ ನ್ಯಾಯವಾದಿಗಳು ತಮ್ಮ ನಿವೇದನೆಯನ್ನು ಸಮರ್ಥಿಸಲು ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

1. ಪರಮಾನಂದ ಸಿಂಗ್ -ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು (2009) 3 ಎಸ್ಸಿಸಿ 2712.

2. ಶ್ರೀಮತಿ ತಸ್ಲಿಮಾ ಎಫ್. -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು ರಿಟ್ ಅರ್ಜಿ ಸಂಖ್ಯೆ 14218/2011, ದಿನಾಂಕ 7-6-2011

13. ಇದಕ್ಕೆ ತದ್ವಿರುದ್ಧವಾಗಿ, ಅರ್ಜಿದಾರರ ಪರ ಹಾಜರಾದ ಹಾಜರಾದ ಮಾನ್ಯ ನ್ಯಾಯವಾದಿಗಳು, ಅರ್ಜಿದಾರರು ಗಳಿಸಿದ ಅಂಕಗಳು 3 ನೇ ಪ್ರತಿವಾದಿಗಳು ಗಳಿಸಿದ ಅಂಕಗಳಿಗಿಂತ ಹೆಚ್ಚಾಗಿದೆ; ಅಧಿಸೂಚಿಸಲಾಗಿದ್ದ ಅಂಕ ಪಟ್ಟಿಯಲ್ಲಿ, ಲಿಖಿತ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಗಳೆರಡರ ಸಂಯೋಜಿತ ಅಂಕಗಳಿದ್ದವು, ಅರ್ಜಿದಾರರ ಹೆಸರನ್ನು ಕ್ರಮಸಂಖ್ಯೆ: 281 ರಲ್ಲಿ 86.20 ಅಂಕಗಳೊಂದಿಗೆ ನಮೂದಿಸಲಾಗಿತ್ತು

ಹಾಗೂ 3 ನೇ ಪ್ರತಿವಾದಿಗಳ ಹೆಸರನ್ನು ಕ್ರಮಸಂಖ್ಯೆ: 691 ರಲ್ಲಿ 84.40 ಅಂಕಗಳೊಂದಿಗೆ ತೋರಿಸಲಾಗಿತ್ತು ಎಂದು ವಾದಿಸಿದ್ದಾರೆ.

14. ಪ್ರಾರಂಭದಲ್ಲಿ 3 ನೇ ಪ್ರತಿವಾದಿಗಳ ಅಂಕಗಳನ್ನು 84.40 ಎಂದು ತೋರಿಸಿದಾಗ, ಅರ್ಜಿದಾರರು ಈ ಕ್ರಮವನ್ನು ವಿರೋಧಿಸಿರಲಿಲ್ಲ ಮತ್ತು ಅಧಿಸೂಚಿಸಿದ್ದ ಅಂಕಗಳನ್ನು ಒಪ್ಪಿಕೊಂಡಿದ್ದರು; ಇನ್ನೊಂದೆಡೆ,ದಿನಾಂಕ: 12.4.2010 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಅಧಿಸೂಚಿಸಿದಾಗ, ಅರ್ಜಿದಾರರ ಹೆಸರು ಕಂಡುಬಂದಿರಲಿಲ್ಲ ಮತ್ತು 87.40 ಹೆಚ್ಚಿಸಿದ ಅಂಕಗಳೊಂದಿಗೆ 3 ನೇ ಪ್ರತಿವಾದಿಗಳ ಹೆಸರನ್ನು ಸದರಿ ಪಟ್ಟಿಯಲ್ಲಿ ತೋರಿಸಲಾಗಿತ್ತು; ತಾತ್ಕಾಲಿಕ ಆಯ್ಕೆ ಪಟ್ಟಿಯು ಹೇಗೆ ಕಾನೂನುಬಾಹಿರವಾಗಿದೆ ಎಂಬ ಬಗ್ಗೆ ವಿವರವಾದ ಆಕ್ಷೇಪಣಾ ಹೇಳಿಕೆಯನ್ನು ಸಲ್ಲಿಸುವ ಮೂಲಕ ಅರ್ಜಿದಾರರು ಕೂಡಲೇ ತಮ್ಮ ವಿರೋಧವನ್ನು ದಾಖಲಿಸಿದ್ದರು ಎಂಬುದು ಮಾನ್ಯ ನ್ಯಾಯವಾದಿಗಳ ನಿವೇದನೆಯಾಗಿದೆ.ಇದಲ್ಲದೆ ಮಾನ್ಯ ನ್ಯಾಯವಾದಿಗಳು, ಆಯ್ಕೆ ಪ್ರಾಧಿಕಾರದ ಕಾನೂನುಬಾಹಿರ ಕ್ರಮದ ಕಾರಣದಿಂದ ಅರ್ಜಿದಾರರು ನೇಮಕಾತಿಯನ್ನು ನಿರಾಕರಿಸಿದ್ದರಾದರೂ, ಹೆಚ್ಚಿಸಿದ ಅಂಕಗಳಿಗಾಗಿ, ಸಹಾಯಕ ಸಾರ್ವಜನಿಕ ಅಭಿಯೋಜಕ-ಮತ್ತು-ಸಹಾಯಕ ಸರ್ಕಾರಿ ನ್ಯಾಯವಾದಿಯಾಗಿ ನೇಮಕ ಹೊಂದಬಹುದಾಗಿತ್ತು ಮತ್ತು 3 ನೇ ಪ್ರತಿವಾದಿಗಳು ಆಯ್ಕೆ ಪ್ರಾಧಿಕಾರವು ಮಾಡಿದ ಮೋಸದ ನೇರ ಫಲಾನುಭವಿಯಾಗಿದ್ದಾರೆಂದು ವಾದಿಸಿದ್ದಾರೆ.

15. 1 ನೇ ಮತ್ತು 2 ನೇ ಪ್ರತಿವಾದಿಗಳ-ರಾಜ್ಯದ ಪರ ಹಾಜರಾದ ಮಾನ್ಯ ಸರ್ಕಾರಿ ವಕೀಲರು, ನ್ಯಾಯ ಮಂಡಳಿಯ ಆದೇಶವು ತಪ್ಪಾದುದಾಗಿದೆ ಮತ್ತು ಸಂಗತಿಗಳಿಗೆ ವಿರುದ್ಧವಾದುದಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ. ಪ್ರತಿವಾದಿಗಳ ಪ್ರಕರಣದಲ್ಲಿ ಉಂಟಾಗಿದ್ದ ತಪ್ಪನ್ನು ಸರಿಪಡಿಸುವ ಅಧಿಕಾರದ ಮಿತಿಯೊಳಗೆ ಅದನ್ನು ಮಾಡಲಾಗಿದ್ದು, ಅಂಥ ಸರಿಪಡಿಕೆಯ ಪರಿಣಾಮವಾಗಿ 3 ನೇ ಪ್ರತಿವಾದಿಗೆ ನೇಮಕಾತಿ ಆದೇಶ ನೀಡಲಾಗಿದೆ ಎಂದು ರಾಜ್ಯವು ನಿವೇದಿಸಿಕೊಂಡಿದೆ.ಇದಲ್ಲದೆ, 3 ನೇ ಪ್ರತಿವಾದಿಗಳನ್ನು ಆಯ್ಕೆ ಮಾಡುವಲ್ಲಿ ಆಯ್ಕೆ ಪ್ರಾಧಿಕಾರದ ವಿವೇಚನೆಯ ಮೇಲೆ ನ್ಯಾಯ ಮಂಡಳಿಯು ತೀರ್ಪು ನೀಡುವ ಅಧಿ ಕಾರವನ್ನು ವಹಿಸಿಕೊಳ್ಳುವುದು ಕಾನೂನಿನಲ್ಲಿ ಅನುಮತೀಯವಲ್ಲವಾದ್ದರಿಂದ, ಅದು ಹಾಗೆ ಮಾಡಬಾರದಿತ್ತು ಎಂದು ರಾಜ್ಯವು ವಾದಿಸಿದೆ ಮತ್ತು ಅರ್ಜಿದಾರನಿಗೆ ರಾಜ್ಯವು 10.00 ಲಕ್ಷ ರೂಗಳ ಪರಿಹಾರ ಸಂದಾಯ ಮಾಡಬೇಕೆಂದು ಐತೀರ್ಪು ನೀಡಿರುವುದನ್ನು ಸಮರ್ಥಿಸಲಾಗದು ಮತ್ತು ಅದು ತಪ್ಪಾದುದಾಗಿದೆ ಎಂದು ರಾಜ್ಯವು ತೀವ್ರವಾಗಿ ವಾದಿಸಿದೆ.

16. ದಾಖಲೆಯಲ್ಲಿರುವ ಸಾಕ್ಷ್ಯವನ್ನು ಮತ್ತು ನಮ್ಮ ಮುಂದೆ ಎಲ್ಲಾ ಪಕ್ಷಕಾರರು ಮಂಡಿಸಿದ ವಾದಗಳನ್ನು ನಾವು ಕಾಳಜಿಯುಕ್ತವಾಗಿ ಪರಿಗಣಿಸಿದ್ದೇವೆ ಹಾಗೂ ಅದನ್ನು ಪರಿಗಣಿಸಿದ ನಂತರ, ಈ ಮುಂದಿನ ಅಂಶಗಳು ನಮ್‌ಮ ಪದ್ಯಾಲೋಚನೆಗೆ ಉದ್ಭವಿಸಿವೆ:

1. ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿ ಹುದ್ದೆಗೆ 3 ನೇ ಪ್ರತಿವಾದಿಯ ನೇಮಕಾತಿಯು ಕಾನೂನುಬದ್ಧವೇ ಮತ್ತು ಸಿಂಧುವೇ?

2. 3 ನೇ ಪ್ರತಿವಾದಿಗಳ ಆಯ್ಕೆಯಲ್ಲಿ ನ್ಯಾಯ ಮಂಡಳಿ ಹಸ್ತಕ್ಷೇಪ ಮಾಡಿರುವುದು ಮತ್ತು ಅರ್ಜಿದಾರಿಗೆ ಸಂದಾಯ ಮಾಡಬೇಕಾದ 10.00 ಲಕ್ಷ ರೂ.ಗಳ ವೆಚ್ಚವನ್ನು ರಾಜ್ಯ ಸರ್ಕಾರದ ಮೇಲೆ ಎ ಹೊರಿಸಿರುವುದು ಸಮರ್ಥನೀಯವೇ?

3. 3 ನೇ ಪ್ರತಿವಾದಿಯ ನೇಮಕಾತಿಯನ್ನು ಉಳಿಸಬೇಕೇ?

17. ಪರಾಮರ್ಶನ ಅಂಶಸಂಖ್ಯೆ: 1

144 ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿಗಳ ಹುದ್ದೆಗಳ ನೌಕರಿಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ,ದಿನಾಂಕ: 18.6.2009 ರಂದು ಅಭಿಯೋಜನೆ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ನೌಕರಿಭರ್ತಿ ಅಧಿಸೂಚನೆಯನ್ನು ಹೊರಡಿಸಿತ್ತು.ಅರ್ಜಿದಾರರು ಮತ್ತು 3 ನೇ ಪ್ರತಿವಾದಿಗಳಿಬ್ಬರೂ ಅನುಸೂಚಿತ ಜಾತಿ ಪ್ರವರ್ಗಕ್ಕೆ ಸೇರಿದವರಾಗಿದ್ದಾರೆ.ಲಿಖಿತ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆ ಇವು ಪರೀಕ್ಷಾ ವಿಧಾನವಾಗಿದ್ದವು.ಎ 7.11.2009 ಮತ್ತು 8.11.2009 ದಿನಾಂಕಗಳಂದು ಲಿಖಿತ ಪರೀಕ್ಷೆಗಳನ್ನು ನಡೆಸಲಾಗಿತ್ತು, ಅದರ ನಂತರ ಸಂದರ್ಶನ/ಮೌಖಿಕ ಪರೀಕ್ಷೆಗಳನ್ನು ನಡೆಸಲಾಗಿತ್ತು.ಲಿಖಿತ ಪರೀಕ್ಷೆ al ಮತ್ತು ಮೌಖಿಕ ಪರೀಕ್ಷಾ ನಿರ್ವಹಣೆಯನ್ನನುಸರಿಸಿ, 2 ನೇ ಪ್ರತಿವಾದಿಗಳು ಪ್ರತಿಯೊಬ್ಬ ಅಭ್ಯರ್ಥಿಯು ಪಡೆದ ಅಂಕಗಳನ್ನು ಅಧಿಸೂಚಿಸಿದ್ದರು.ಪ್ರಕಟಿಸಲಾಗಿದ್ದ ಅಧಿಸೂಚನೆಗೆ ವಿವರವಾದ ಶೀರ್ಷಿಕೆಯನ್ನು ನೀಡಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

" ಅಧಿಸೂಚನೆಸಂಖ್ಯೆ: ಸಸಅ 01 ಆರ್ಸಿ 2009,ದಿನಾಂಕ: 18 ನೇ ಜೂನ್, 2009 ರ ಮೇರೆಗೆ ಕರ್ನಾಟಕದ ಅಭಿಯೋಜನೆಗಳು 9 ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿಗಳ ಖಾಲಿ ಹುದ್ದೆಗಳಿಗೆ ಅಭ್ಯರ್ಥಿಗಳ ಮತ್ತು ಅಖಿತ ಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆಯಲ್ಲಿ ಪಡೆದ ಅಂಕಗಳ ಪಟ್ಟ. "

18. ಅಧಿಸೂಚನೆಯ ಶೀರ್ಷಿಕೆಯ ಸರಳ ಓದುವಿಕೆಯಿಂದ, ಅದು ಲಿಖಿತ ಪರೀಕ್ಷೆಯಲ್ಲಿ ಮತ್ತು ಮೌಖಿಕ ಪರೀಕ್ಷೆಯಲ್ಲಿ ಪಡೆದ ಅಂಕಗಳ ಸಂಯೋಜನೆಯಾಗಿತ್ತು ಎಂಬುದು ಸಂದೇಹಕ್ಕೆ ಆಸ್ಪದವಿಲ್ಲದಂತೆ ಸ್ಪಷ್ಟವಾಗುತ್ತದೆ. ಸದರಿ ಅಧಿಸೂಚನೆಯಲ್ಲಿ,

ಕ್ರಮಸಂಖ್ಯೆ: 281 ರಲ್ಲಿರುವ ಅರ್ಜಿದಾರರ ಹೆಸರನ್ನು ಈ ಮುಂದಿನಂತೆ ನಮೂದಿಸಲಾಗಿದೆ:

| **ಕ್ರಮ ಸಂಖ್ಯೆ** | **\| ನೋಂದಣಿ ಸಂಖ್ಯೆ** | **ಅಭ್ಯರ್ಥಿಯ ಹೆಸರು** | **ಒಟ್ಟು ಅಂಕಗಳು** |
|---|---|---|---|
| 281 | 1342 | ರೇವಣ್ಣ ಪಿ.ಸಿ. | 86.20 |

ಪಕ್ಕದಲ್ಲೇ, 3 ನೇ ಪ್ರತಿವಾದಿಯ ಹೆಸರನ್ನು 691 ನೇ ಕ್ರಮ ಸಂಖ್ಯೆಯಲ್ಲಿ ತೋರಿಸಲಾಗಿದ್ದು, ಅವರ ವಿವರಗಳನ್ನು ಈ ಕೆಳಗಿನಂತೆ ಓದಲಾಗಿದೆ:

| ಕ್ರಮ ಸಂಖ್ಯೆ | ನೋಂದಣಿ ಸಂಖ್ಯೆ | ಅಭ್ಯರ್ಥಿಯ ಹೆಸರು \| | ಒಟ್ಟು ಅಂಕಗಳು |
|---|---|---|---|
| 691 | 3598 | ಅಶೋಕ್ ಕುಮಾರ್ ಲಕ್ಷ್ಮಣ್ ರಾವ್ | 84.40 |

ಇದರಲ್ಲಿ ಮೇಲೆ ಉದ್ಧರಿಸಿದ ಕೋಷ್ಟಕಗಳು ಎರಡು ಸಂಗತಿಗಳನ್ನು ಸ್ಪಷ್ಟಪಡಿಸುತ್ತವೆ, ಮೊದಲನೆಯದು, ಅಂಕಗಳು ಲಿಖಿತ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಯ ಸಂಯೋಜನೆಯಾಗಿದ್ದವು ಹಾಗೂ ಎರಡನೆಯದು, 3 ನೇ ಪ್ರತಿವಾದಿಗಳ ಅಂಕಗಳು ಅರ್ಜಿದಾರರ ಅಂಕಗಳಿಗಿಂತ ಕಡಿಮೆಯಾಗಿವೆ ಎಂಬುದು.

19. ಸೂಚಿಸಲಾದ ಅಂಕಗಳ ನಿಬಂಧನೆಗಳಿಗನುಸಾರವಾಗಿ, ಅರ್ಜಿದಾರರನ್ನು ಆಯ್ಕೆ ಮಾಡಬೇಕಾಗುತ್ತದೆ.ದಿನಾಂಕ: 26.10.2010 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಅಧಿಸೂಚಿಸಿ ರಾಜ್ಯ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿದೆ.ಆಶ್ಚರ್ಯವೆಂಬಂತೆ, ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ, ಅರ್ಜಿದಾರರ ಹೆಸರನ್ನು ನಮೂದಿಸಿರುವುದಿಲ್ಲ.ಆದರೆ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿಗಳ ಹುದ್ದೆಗೆ ತಾತ್ಕಾಲಿಕ ಆಯ್ಕೆಯಾಗಿ ಕ್ರಮಸಂಖ್ಯೆ: 130 ರಲ್ಲಿ 3 ನೇ ಪ್ರತಿವಾದಿಗಳ ಹೆಸರನ್ನು ತೋರಿಸಲಾಗಿತ್ತು, ಹೆಚ್ಚು ಆಘಾತಕರ ವಿಷಯವೆಂದರೆ, 84.40 ರಷ್ಟಿದ್ದ ಅವರ ಅಂಕಗಳನ್ನು 87.40 ಅಂಕಗಳಿಗೆ ಹೆಚ್ಚಿಸಲಾಗಿದೆ.ಹೆಚ್ಚಿನ ಅಂಕಗಳನ್ನು ಹೊಂದಿದ್ದಂಥ ಅರ್ಜಿದಾರರ ಹೆಸರನ್ನು, ಅದೇ ಅಂಕಗಳ ಸಹಿತ, ಎಂದರೆ 86.20 ಅಂಕಗಳೊಂದಿಗೆ ಹೆಚ್ಚುವರಿ ಆಯ್ಕೆ ಪಟ್ಟಿಯ ಕ್ರಮಸಂಖ್ಯೆ: 13 ರಲ್ಲಿ ಸೇರಿಸಲಾಗಿದೆ.ಹಾಗಾಗಿ ಇದು, 3 ನೇ ಪ್ರತಿವಾದಿಗಳನ್ನು ಪರಿಗಣನಾ ವಲಯದೊಳಗೆ ತರುವ ಸಲುವಾಗಿ ಅವರ ಅಂಕಗಳನ್ನು ಹೆಚ್ಚಿಸಿ, ಅವರು ಆಯ್ಕೆಯಾಗಿರುವುದನ್ನು ತೋರಿಸಿದ ಸ್ಪಷ್ಟ ಪ್ರಕರಣವಾಗಿದೆ.

20. ಅರ್ಜಿದಾರರು 3 ನೇ ಪ್ರತಿವಾದಿಗಳಿಗಿಂತ ಹೆಚ್ಚಿನ ಅರ್ಹತೆಯುಳ್ಳವರಾದ್ದರಿಂದ, 3 ನೇ ಪ್ರತಿವಾದಿಗಳ ಹೆಸರನ್ನು ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ತೋರಿಸಬಾರದಾಗಿತ್ತು ಎಂದು ಹೇಳಿ ಅರ್ಜಿದಾರರು ತಕ್ಷಣವೇ ಸದರಿ ಕ್ರಮವನ್ನು ವಿರೋಧಿಸಿದ್ದಾರೆ.ಅವರ ಆಕ್ಷೇಪಣೆಯನ್ನು ಪರಿಗಣಿಸಿರಲಿಲ್ಲ.ಆ ಹಂತದಲ್ಲಿ, ಅರ್ಜಿದಾರರು ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸಬಾರದು ಮತ್ತು 3 ನೇ ಪ್ರತಿವಾದಿಗಳಿಗೆ ನೇಮಕಾತಿ ಆದೇಶವನ್ನು ನೀಡಬಾರದೆಂಬ ಮಧ್ಯಂತರ ಮನವಿಯನ್ನು ಕೋರಿ ಅರ್ಜಿಸಂಖ್ಯೆ: 4005/2010 ರಲ್ಲಿ ನ್ಯಾಯ ಮಂಡಳಿಯನ್ನು ಸಂಪರ್ಕಿಸಿದ್ದಾರೆ.ಮಧ್ಯಂತರ ಆದೇಶವನ್ನು ನೀಡದೆ ಇದ್ದದ್ದರಿಂದ, ಪ್ರತಿವಾದಿ-ಸರ್ಕಾರವುದಿನಾಂಕ: 30.10.2010 ರಂದು 3 ನೇ ಪ್ರತಿವಾದಿಯ ಪರವಾಗಿ ನೇಮಕಾತಿ ಆದೇಶವನ್ನು ನೀಡಿದ್ದಾರೆ ಮತ್ತು ಇದರಿಂದ, 3 ನೇ ಪ್ರತಿವಾದಿಗೆ ನೀಡಿದ ನೇಮಕಾತಿ ಆದೇಶದ ಅನುಸರಣೆಯಲ್ಲಿ ಅವರುದಿನಾಂಕ: 11.11.2010 ರಂದು ಶೋರಾಪುರದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರೆಂಬುದು ಕಂಡುಬರುತ್ತದೆ.

21. ನ್ಯಾಯ ಮಂಡಳಿಯ ಮುಂದೆ ವಿಷಯದ ಸುನಾವಣೆಯ ಅವಧಿಯಲ್ಲಿ, 3 ನೇ ಪ್ರತಿವಾದಿಗಳ ಅಂಕಗಳು 84.40 ರಿಂದ 87.40 ಕ್ಕೆ ಹೇಗೆ ಹೆಚ್ಚಳವಾಗಿದೆ ಎಂಬುದನ್ನು ಪರಿಶೀಲಿಸುವ ಸಲುವಾಗಿ ಮೂಲ ದಾಖಲೆಗಳನ್ನು ಸಲ್ಲಿಸಲು ಆದೇಶಿಸಲಾಗಿತ್ತು ಮತ್ತು ದಾಖಲೆಗಳನ್ನು ಸಲ್ಲಿಸುವ ಆದೇಶಕ್ಕೆ ಉತ್ತರವಾಗಿ, ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿಗಳ ಆಯ್ಕೆ ಸಮಿತಿಯ ಕಾರ್ಯದರ್ಶಿಗಳು, ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿಗಳ ಆಯ್ಕೆಯ ಸಂಬಂಧದಲ್ಲಿ ಸಮಿತಿಯು ಅದನ್ನು ನಾಶಪಡಿಸುವ ನಿರ್ಣಯ ತೆಗೆದುಕೊಂಡಿದ್ದರಿಂದಾಗಿ, 3 ನೇ

ಪ್ರತಿವಾದಿಗಳ ಮೂಲ ಉತ್ತರ ಪತ್ರಿಕೆಗಳು ಲಭ್ಯವಿರಲಿಲ್ಲವೆಂದುದಿನಾಂಕ: 29.8.2018 ರ ಅವರ ಪತ್ರದ ಮೂಲಕ ತಿಳಿಸಿದ್ದಾರೆ.III ನೇ ಹೆಚ್ಚುವರಿ ಸರ್ಕಾರಿ ಅಭಿಯೋಜಕರು, ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಇವರು ಆ ಪರಿಣಾಮಕ್ಕೆದಿನಾಂಕ: 16.10.2019 ರ ಅಫಿಡಾವಿಟ್ಟನ್ನು ಸಹ ಸಲ್ಲಿಸಿದ್ದರು.ಈ ಪತ್ರದೊಂದಿಗೆ, ಉತ್ತರ ಪತ್ರಿಕೆ ನಾಶಪಡಿಸುವ ನಿರ್ಣಯಕ್ಕೆ ಸಂಬಂಧಿಸಿದಂತೆ ನಿರ್ವಹಿಸಿದ ಟಿಪ್ಪಣಿ ಹಾಳೆಯನ್ನು ಸಹ ಲಗತ್ತಿಸಲಾಗಿತ್ತು.ಅನುಸೂಚಿತ ಜಾತಿ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಸಂಬಂಧಿಸಿರುವಷ್ಟರಮಟ್ಟಿಗಿನ ಪ್ರತ್ಯೇಕ ಅರ್ಹತಾ ಪಟ್ಟಿಯು ಲಗತ್ತಿಸಲಾಗಿದ್ದು ಇತರ ದಸ್ತಾವೇಜಾಗಿದ್ದು, ಅದರಲ್ಲಿ 3 ನೇ ಪ್ರತಿವಾದಿಗಳ ಹೆಸರನ್ನು ಕ್ರಮಸಂಖ್ಯೆ: 16 ರಲ್ಲಿ ತೋರಿಸಲಾಗಿದ್ದು, ಅದರಲ್ಲಿ ಅವರ ಅಂಕಗಳನ್ನು 87.40 ಕ್ಕೆ ಹೆಚ್ಚಿಸಲಾಗಿತ್ತು.ಅದನ್ನು ಅಥವಾ ಈ ದಸ್ತಾವೇಜಿನ ಸಮರ್ಥನೆಯನ್ನು, 3 ನೇ ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು, ಮುದ್ರಣ ದೋಷದ ರೂಪದಲ್ಲಿ ಉದ್ದೇಶಪೂರ್ವಕವಲ್ಲದ ತಪ್ಪು ಜರುಗಿತ್ತೆಂದು, ಮೊದಲ ಅಧಿಸೂಚನೆಯನ್ನು ಹೊರಡಿಸಿದಾಗ 84.40 ಎಂಬುದಾಗಿ ಅಂಕಗಳನ್ನು ತೋರಿಸಲಾಗಿದ್ದು, ಅದನ್ನು ಮೌಖಿಕ ಪರೀಕ್ಷೆಯ 3.40 ಅಂಕಗಳನ್ನು ಸೇರಿಸುವ ಮೂಲಕ ತರುವಾಯದಲ್ಲಿ ಸರಿಪಡಿಸಲಾಗಿತ್ತು, ಅದು 3 ನೇ ಪ್ರತಿವಾದಿಯ ಒಟ್ಟು ಅಂಕಗಳನ್ನು 87.40 ಕ್ಕೆ ತೆಗೆದುಕೊಂಡು ಹೋಯಿತೆಂದು ಒಕ್ಕೊರಲಿನಿಂದ ವಾದಿಸಿದ್ದಾರೆ.

22. ಪ್ರಾರಂಭದಿಂದ ಆಯ್ಕೆವರೆಗೆ 3 ನೇ ಪ್ರತಿವಾದಿಗಳು ಪಡೆದುಕೊಂಡ ಅಂಕಗಳನ್ನು ತೋರಿಸುವ ಕೋಷ್ಟಕಗಳನ್ನು ಸಿದ್ಧ ಪರಾಮರ್ಶನೆಗಾಗಿ ಈ ಕೆಳಗೆ ಉದ್ಧರಿಸಲಾಗಿದೆ:

ಪ್ರಾರಂಭದಲ್ಲಿ ಪಡೆದ ಅಂಕಗಳು

| **ಕ್ರಮ ಸಂಖ್ಯೆ** | **ನೋಂದಣಿ ಸಂಖ್ಯೆ** | **ಅಭ್ಯರ್ಥಿಯ ಹೆಸರು** | **ಒಟ್ಟು ಅಂಕಗಳು** |
|---|---|---|---|
| 691 | 3598 | ಅಶೋಕ್ ಕುಮಾರ್ ಲಕ್ಷಣ್ | 84.40 |

ದಿನಾಂಕ 12.4.2010 ರ ಅನುಸೂಚಿತ ಜಾತಿ ಪ್ರವರ್ಗ ಆಯ್ಕೆ ಪಟ್ಟಿಯಲ್ಲಿರುವ ಬದಲಾಯಿಸಿದ ಅಂಕಗಳು

| **ಕ್ರಮ ಸಂಖ್ಯೆ** | **ನೋಂದಣಿ ಸಂಖ್ಯೆ** | **ಅಭ್ಯರ್ಥಿಯ ಹೆಸರು** | **ಲಿಂಗ** | **ಜನ್ಮ ದಿನಾಂಕ** | **ಮೀಸಲಾತಿ** | **ಲಿಖಿತ ಪರೀಕ್ಷಾ ಅಂಕಗಳು** | **ಮೌಖಿಕ ಪರೀಕ್ಷಾ ಅಂಕಗಳು** | **ಒಟ್ಟು ಅಂಕಗಳು** | **ಷರಾ** |
|---|---|---|---|---|---|---|---|---|---|
| 16 | 3598 | ಅಶೋಕ್ ಕುಮಾರ್ ಲಕ ಣ | ಪುರುಷ | 6.12.1971 | ಪರಿಶಿಷ್ಟ ಜಾತಿ | 34.00 | 2.40 | 87.40 | ಎಸ್ ಸಿ ಜಿ |

2 ನೇ ಪ್ರತಿವಾದಿಗಳು ಹೊರಡಿಸಿದದಿನಾಂಕ: 26.10.2010 ರ ತಾತ್ಕಾಲಿಕ ಆಯ್ಕೆ

| ಕ್ರಮ ಸಂಖ್ಯೆ | ನೋಂದಣಿ ಸಂಖ್ಯೆ | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ಲಿಂಗ | ದಿನಾಂಕ | ಮೀಸಲಾತಿ |
|---|---|---|---|---|---|
| ( 130 ) | 3598 | ಅಶೋಕ್ ಕುಮಾರ್ ಲಕ್ಷ್ಮಣರಾವ್ , ಮನೆ ೬ ನಂ . 44 , ಗೋಕುಲ ನಗರ , ಜಿ.ಡಿ.ಎ. ಬಡಾವಣೆ , ಶಹಾಬಜಾರ್ ಹತ್ತಿರ , ಗುಲಬರ್ಗ | ಪುರುಷ | 6.12.1971 | ಪರಿಶಿಷ್ಟ ಜಾತಿ / ಸಾಮಾನ್ಯ |

3 ನೇ ಪ್ರತಿವಾದಿಯು ಪಡೆದ ಲಿಖಿತ ಪರೀಕ್ಷೆಯಲ್ಲಿನ ಅಂಕಗಳನ್ನು 84.00 ಎಂದು ಮತ್ತು ಮೌಖಿಕ ಪರೀಕ್ಷೆಯಲ್ಲಿನ ಅಂಕಗಳನ್ನು 3.40 ಎಂದು ಹಾಗೂ ಒಟ್ಟು ಅಂಕಗಳನ್ನು 87.40 ಎಂದು ತೋರಿಸುವ ಅನುಸೂಚಿತ ಜಾತಿ ಪ್ರವರ್ಗ ಆಯ್ಕೆ ಪಟ್ಟಿ ಎಂಬ ಶೀರ್ಷಿಕೆಯನ್ನು ಹೊಂದಿರುವ ಪಟ್ಟಿಯಲ್ಲಿ ಸರ್ಕಾರವು ನೀಡಿರುವ ಸಮರ್ಥನೆಯಾಗಿ 3 ನೇ ಪ್ರತಿವಾದಿಯ ನೇಮಕಾತಿಯು ಕಾನೂನುಬಾಹಿರವಾಗಿದೆ ಎಂಬುದನ್ನು ಮೇಲೆ-ಉದ್ಧತ ಕೋಷ್ಟಕಗಳು ಸ್ಪಷ್ಟವಾಗಿ ತೋರಿಸುತ್ತಿವೆ.3 ನೇ ಪ್ರತಿವಾದಿಯು ಪಡೆದ ಅಂಕಗಳಲ್ಲಿ, ಅಂಕಗಳು ಹೇಗೆ 84.40 ರಿಂದ 84.00 ಆಯಿತೆಂಬುದು ಮತ್ತು ಅಧಿಸೂಚನೆಯ ಶೀರ್ಷಿಕೆಯನ್ನು ಓದಲಾಗಿ ಅದು ಲಿಖಿತ ಪರೀಕ್ಷೆ ಎ ಮತ್ತು ಮೌಖಿಕ ಪರೀಕ್ಷೆಗಳೆರಡರ ಸಂಯೋಜಿತ ಅಂಕಗಳೆಂಬುದರ ಹೊರತಾಗಿಯೂ ಮೌಖಿಕ ಪರೀಕ್ಷೆಯ ಅಂಕಗಳನ್ನು ಹೇಗೆ 84.40 ಒಳಗೊಂಡಿರುವುದಿಲ್ಲ ಎಂಬುದು ರಹಸ್ಯವಾಗಿದೆ/ಅಸ್ಪಷ್ಟವಾಗಿದೆ ಹಾಗೂ ಈ ಸಂಬಂಧದಲ್ಲಿ ಯಾವ ವಿವರಣೆಯನ್ನು ಒದಗಿಸಿರುವುದಿಲ್ಲ.ಹಾಗಾಗಿ, ಎರಡೂ ದಸ್ತಾವೇಜುಗಳು ಪರಸ್ಪರ ವಿರುದ್ಧವಾಗಿದ್ದು, ಇದು ಆಯ್ಕೆ ಪ್ರಾಧಿಕಾರವು ಮೋಸ ಎಸಗಿರುವ ಸ್ಪಷ್ಟ ಪ್ರಕರಣವಾಗಿದೆ.ಆದರೆ ಹೆಚ್ಚಿಸಿದ ಅಂಕಗಳ ಸಂಬಂಧದಲ್ಲಿ, 3 ನೇ ಪ್ರತಿವಾದಿಗಳನ್ನು ಸಹಾಯಕ ಸರ್ಕಾರಿ ಅಭಿಯೋಜಕರ-ಮತ್ತು-ಸಹಾಯಕ ಸರ್ಕಾರಿ ನ್ಯಾಯವಾದಿಗಳ ಹುದ್ದೆಗೆ ನೇಮಕ ಮಾಡಬಾರದಿತ್ತು ಮತ್ತು ಹೆಚ್ಚಿಸಿದ ಅಂಕಗಳು ವ್ಯವಸ್ಥಿತ ಮೋಸದ ಉತ್ಪತ್ತಿಯಾಗಿವೆ.ಇನ್ನಾವುದೇ ನಿರ್ಣಯಕ್ಕೆ ಬರಲು, ಮೂಲ ದಾಖಲೆಗಳನ್ನು/ಉತ್ತರ ಪತ್ರಿಕೆಗಳನ್ನು ಪರೀಕ್ಷಿಸಬೇಕಾಗುತ್ತದೆ; ಆದರೆ, 3 ನೇ ಪ್ರತಿವಾದಿಗಳ ಉತ್ತರ ಪತ್ರಿಕೆಗಳನ್ನು ರಾಜ್ಯವು ಸಲ್ಲಿಸಿದ ಅಫಿಟಾವಿನ ನಿಬಂಧನೆಗಳನುಸಾರ ನಾಶಪಡಿಸಲಾಗಿದೆ.ಹಾಗಾಗಿ, ಸಹಾಯಕ ಸರ್ಕಾರಿ ಅಭಿಯೋಜಕ-ಮತ್ತು-ಸಹಾಯಕ ಸರ್ಕಾರಿ ನ್ಯಾಯವಾದಿಯಾಗಿ 3 ನೇ ಪ್ರತಿವಾದಿಗಳ ನೇಮಕಾತಿಯು ಕಾನೂನುಬಾಹಿರವಾಗಿತ್ತು ಮತ್ತು ಅವರು ಅರ್ಜಿದಾರರಿಗಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಂಥ ಅಭ್ಯರ್ಥಿಯಾಗಿರದಿದ್ದ ಕಾರಣದಿಂದ ಚ ಪ್ರಾರಂಭದಿಂದಲೇ ಅಸಿಂಧುವಾಗುತ್ತದೆ ಹಾಗೂ ಉದ್ದೇಶಪೂರ್ವಕವಲ್ಲದ ತಪ್ಪು ಅಥವಾ ಮುದ್ರಣ ದೋಷಕ್ಕೆ ಸಂಬಂಧಿಸಿದಂತೆ ಸರ್ಕಾರವು ನೀಡಿದ ಸಮರ್ಥನೆಯನ್ನು ನಾವು ಒಪ್ಪುವುದಿಲ್ಲ.

ಆದ್ದರಿಂದ, ಪರಾಮರ್ಶನಾ ಅಂಶಸಂಖ್ಯೆ: 1 ಅರ್ಜಿದಾರರ ಪರವಾಗಿದೆ ಎಂದು ನಾವು ನಿರ್ಣಯಿಸಿದ್ದೇವೆ.

23. ಪರಾಮರ್ಶನಾ ಅಂಶಸಂಖ್ಯೆ: 2-

ನ್ಯಾಯ ಮಂಡಳಿಯು ವಿಷಯವನ್ನು ಕೂಲಂಕಷವಾಗಿ ಪರಿಗಣಿಸಿದೆ ಮತ್ತು ಪ್ರಶ್ನಿತ ಆದೇಶದಲ್ಲಿ, 3 ನೇ ಪ್ರತಿವಾದಿಯ ನೇಮಕಾತಿಯನ್ನು ರದ್ದುಗೊಳಿಸಲು ಮತ್ತು ಅರ್ಜಿದಾರರ ನೇಮಕಾತಿಯನ್ನು ಪರಿಗಣಿಸುವ ಕುರಿತು ನೀಡಿದ ನಿರ್ದೇಶನಕ್ಕೆ ತರ್ಕಬದ್ಧ ಕಾರಣಗಳನ್ನು ನೀಡಿದೆ.ಮೂಲ ದಾಖಲೆಗಳನ್ನು/ಉತ್ತರ ಪತ್ರಿಕೆಗಳನ್ನು ರಾಜ್ಯವು ನಾಶಪಡಿಸಿತ್ತೆಂಬುದು ಅದರ ನಿಲುವಾಗಿರುವುದರಿಂದ, 3 ನೇ ಪ್ರತಿವಾದಿಯ ಮೂಲ ದಾಖಲೆಗಳನ್ನು/ಉತ್ತರ ಪತ್ರಿಕೆಗಳನ್ನು ಹಾಜರುಪಡಿಸದೆ ಇರುವುದಕ್ಕೆ ಪ್ರತಿಕೂಲಕರ ಹಸ್ತಕ್ಷೇಪ ಮಾಡಿರುವುದನ್ನು ನ್ಯಾಯ ಮಂಡಳಿಯು ಸಮರ್ಥಿಸಿಕೊಂಡಿತ್ತು.ಹಾಗೆ ಮಾಡುವಾಗ, ನ್ಯಾಯ ಮಂಡಳಿಯು, 1 ನೇ ಪ್ರತಿವಾದಿ ರಾಜ್ಯ ಸರ್ಕಾರವು ಅರ್ಜಿದಾರರಿಗೆ ಸಂದಾಯ ಮಾಡಬೇಕಿರುವ 10.00 ಲಕ್ಷ ರೂ.ಗಳ ಮೊತ್ತದ ಪರಿಹಾರದ ಐತೀರ್ಪನ್ನು ಸಹ ನೀಡಿದೆ.

24. 1 ನೇ ಪ್ರತಿವಾದಿಗಳು ಒಳಾಡಳಿತ ಇಲಾಖೆಯಾಗಿದ್ದು, ಅದನ್ನು ಅದರ ಪ್ರಧಾನ ಕಾರ್ಯದಶಿಗಳು ಪ್ರತಿನಿಧಿಸಿದ್ದಾರೆ.ಸರ್ಕಾರವು ಅರ್ಜಿದಾರರಿಗೆ ಪರಿಹಾರವನ್ನು ಸಂದಾಯ ಮಾಡಬೇಕೆಂದು ನಿರ್ದೇಶಿಸಲಾಗಿದೆ.ಸಂಶಯಕ್ಕೆಡೆಯೇ ಇಲ್ಲದಂತೆ, 3 ನೇ ಪ್ರತಿವಾದಿಗಳ ನೇಮಕಾತಿಗೆ ಸಂಬಂಧಪಡುವಷ್ಟರಮಟ್ಟಿಗೆ ಆಯ್ಕೆ ಪ್ರಕ್ರಿಯೆಯು, ಮೋಸದಿಂದಾಗಿ ನಿರರ್ಥಕಗೊಂಡಿದ್ದು, ಅದರಿಂದಾಗಿ, ಅರ್ಜಿದಾರರನ್ನು ನೇಮಕಾತಿಗೆ ಪರಿಗಣಿಸಬೇಕೆಂದು ನಿರ್ದೇಶಿಸುವ ಮೂಲಕ ಅವರಿಗೆ ಪರಿಹಾರ ಒದಗಿಸಬೇಕಿದೆ.ಆದರೆ, ಅರ್ಜಿದಾರರಿಗೆ ಸರ್ಕಾರವು ಪರಿಹಾರ ನೀಡುವುದು, ರಾಜ್ಯವನ್ನು ದಂಡನೆಗೊಳಪಡಿಸುವುದಕ್ಕೆ ಸಮನಾದ್ದರಿಂದ ಅದು ಸೂಕ್ತವಲ್ಲ.ಪರಿಹಾರ ಸಂದಾಯ ಮಾಡುವ ನಿರ್ದೇಶನವು ಸಿಂಧುವಾಗಿದೆಯಾದರೂ, ಸರ್ಕಾರದಿಂದಲ್ಲ.ವಿಷಯಕ್ಕೆ ಸಂಬಂಧಿಸಿದಂತೆ ಈ ಅಂಶವನ್ನು ಕುರಿತು ಮಾತ್ರವೇ ನ್ಯಾಯ ಮಂಡಳಿಯ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅವಶ್ಯಕತೆ ಇದೆ. ಆಯ್ಕೆ ಪ್ರಾಧಿಕಾರವು ಮೋಸವನ್ನು ಎಸಗಿದೆ ಎಂಬುದು ನಮ್ಮ ನಿರ್ಣಯವಾಗಿದೆ.ಆದುದರಿಂದ, ಅರ್ಜಿದಾರರಿಗೆ ಸಂದಾಯ ಮಾಡಬೇಕೆಂದು ನಿರ್ದೇಶಿಸಿದ ಪರಿಹಾರದ ಹಣವನ್ನು 1 ನೇ ಪ್ರತಿವಾದಿಗಳು ಕೊಡಬೇಕು, ಮತ್ತು ನಂತರ ಅಂಥ ಮೋಸ ಎಸಗಲು ಹೊಣೆಗಾರರಾದ ಅಧಿಕಾರಿಗಳನ್ನು ಗುರುತಿಸಿ, ವಿಚಾರಣೆ ನಡೆಸಿ, ಹೊಣೆಗಾರಿಕೆಯನ್ನು ನಿಗದಿಪಡಿಸಿ ಮತ್ತು ನಂತರ ಯುಕ್ತ ಕಾನೂನು ಪ್ರಕ್ರಿಯೆಯನ್ನು ಅನುಸರಿಸಿ, ಅಂಥ ಮೋಸ ಎಸಗಲು ಹೊಣೆಗಾರರಾದ ಅಧಿಕಾರಿಗಳಿಂದ ಅದನ್ನು ವಸೂಲು ಮಾಡಬೇಕು ಎಂದು ನಾವು ನಿರ್ದೇಶಿಸುತ್ತೇವೆ.ಮೇಲೆ ಹೇಳಲಾದ ಮಾರ್ಪಾಡನ್ನು ಹೊರತುಪಡಿಸಿ, ನ್ಯಾಯ ಮಂಡಳಿಯ ಉಳಿದ ಆದೇಶದಲ್ಲಿ ಯಾವುದೇ ಹಸ್ತಕ್ಷೇಪದ ಅವಶ್ಯಕತೆ ಇಲ್ಲ.

ಆದ್ದರಿಂದ, ಪರಾಮರ್ಶನಾ ಅಂಶಸಂಖ್ಯೆ: 2 ಕ್ಕೆ ತದನುಸಾರವಾಗಿ ಉತ್ತರಿಸಲಾಗಿದೆ.

25. ಪರಾಮರ್ಶನಾ ಅಂಶಸಂಖ್ಯೆ: 3-

3 ನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು, ಇದರಲ್ಲಿ ಮೇಲೆ ಹೇಳಿದಂತೆ, 3 ನೇ ಪ್ರತಿವಾದಿಯು ಆಯ್ಕೆ ಪ್ರಕ್ರಿಯೆಯಲ್ಲಿ ಮುಗ್ಧ ಪಾಲುದಾರ, ಪ್ರಾಧಿಕಾರವೇ ಮೋಸವನ್ನು ಎಸಗಿದರೆ, 3 ನೇ ಪ್ರತಿವಾದಿಯು ಆ ಮೋಸದಲ್ಲಿ ಪಾಲ್ಗೊಂಡಿರುವುದಿಲ್ಲ ಮತ್ತು ಸಹಾಯಕ ಸರ್ಕಾರಿ ಅಭಿಯೋಜಕ-ಮತ್ತು D ಸಹಾಯಕ ಸರ್ಕಾರಿ

ನ್ಯಾಯವಾದಿಯಾಗಿ ಅವರು ಹತ್ತು ವರ್ಷಗಳ ಸೇವೆಯನ್ನು ಸಲ್ಲಿಸಿರುವುದರಿಂದ, ಅವರ ನೇಮಕಾತಿಗೆ ತೊಂದರೆ ನೀಡಬಾರದೆಂದು ನಿವೇದಿಸಿಕೊಂಡಿದ್ದಾರೆ.ಮಾನ್ಯ ನ್ಯಾಯವಾದಿಗಳು, ಪರಮಾನಂದ ಸಿಂಗ್ ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು (ಮೇಲಿನಂತೆ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದು, ಅದರಲ್ಲಿನ 7 ನೇ ಕಂಡಿಕೆಯಲ್ಲಿ, ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

7. ಮೂಲ ದಸ್ತಾವೇಜುಗಳು ರಾಮದಯಾಳು ಸಿಂಗ್ ಕಾಲೇಜ್, ಮುಜಾಫರ್ಪುರ ಸಂಸ್ಥೆಯ ಬಳಿ ಇರುವ ಕಾರಣದಿಂದ ಪ್ರಾಧಿಕಾರಗಳ ಮುಂದೆ ಅವುಗಳನ್ನು ಹಾಜರುಪಡಿಸಿರಲಿಲ್ಲ ಮತ್ತು ಮೇಲ್ಮನವಿದಾರರು ಮೂಲ ದಸ್ತಾವೇಜುಗಳನ್ನು ಹಾಜರುಪಡಿಸುವ ಸ್ಥಿತಿಯಲ್ಲಿ ಇರಲಿಲ್ಲ ಎಂಬುದು ವಿವಾದವಾಗಿಲ್ಲ.ಮೇಲೆ ಹೇಳಿದ ವಿಷಯಗಳ ಹಿನ್ನೆಲೆಯಲ್ಲಿ, ಇಲಾಖಾ ಪ್ರಾಧಿಕಾರಿಗಳು ಅಭಿಪ್ರಾಯಪಟ್ಟಂತೆ ಮೂಲ ದಸ್ತಾವೇಜುಗಳನ್ನು ಹಾಜರುಪಡಿಸುವ ಯಾವುದೇ ಅಗತ್ಯವಿದೆಯೇ ಎಂಬುದನ್ನು ಪರಿಶೀಲಿಸುವ ಅವಶ್ಯಕತೆ ಇಲ್ಲ. 6 6 ನೇ ನೇ ಪ್ರತಿವಾದಿಗಳು ಅವರ ಕೆಲಸದಲ್ಲಿ ಮುಂದುವರಿದಿದ್ದಾರೆ.ಆದುದರಿಂದ, ಅವರ ಮುಂದುವರಿಕೆಗೆ ಅಡ್ಡಿಯಾಗದ ಂ ತೆ, ಮೇಲ್ಮನವಿದಾರರಿಗೆ ವ್ಯವಸ್ಥೆ ಮಾಡಬಹುದಾಗಿರುವ ಹತ್ತಿರದ ಪ್ರದೇಶದಲ್ಲಿ ಯಾವುದಾದರೂ ಖಾಲಿ ಹುದ್ದೆ ಇದ್ದ ಸಂದರ್ಭದಲ್ಲಿ, ಅತ್ಯಗತ್ಯ ಮಾನದಂಡಗಳನ್ನು ಅನುಸರಿಸಿದ ನಂತರ, ಪ್ರಾಧಿಕಾರಿಗಳು ಅದನ್ನು ಮಾಡಬಹುದಾಗಿದೆ ಎಂದು ನಾವು ನಿರ್ದೇಶಿಸುತ್ತೇವೆ.ಮೇಲ್ಮನವಿದಾರರು ಹಿಂದಿನ ಯಾವುದೇ ವೇತನಕ್ಕೆ ಅರ್ಹರಾಗತಕ್ಕದ್ದಲ್ಲ ಮತ್ತು 6 ನೇ ಪ್ರತಿವಾದಿಯ ಮುಂದುವರಿಕೆಗೆ ಅಡ್ಡಿಯುಂಟು ಮಾಡತಕ್ಕದ್ದಲ್ಲ. "1

26. ಇದಲ್ಲದೆ ಅವರು, ಶ್ರೀಮತಿ ತಸ್ಲಿಮಾ ಎಫ್. -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು (ಮೇಲಿನಂತೆ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮಾನ್ಯ ವಿಭಾಗೀಯ ಪೀಠದ ತೀರ್ಪನ್ನು ಅವಲಂಬಿಸಿದ್ದು, ಅದರಲ್ಲಿನ 4 ನೇ ಮತ್ತು 5 ನೇ ಕಂಡಿಕೆಗಳ ಸುಸಂಗತ ಭಾಗವನ್ನು ಈ ಕೆಳಗಿನಂತೆ ಓದಲಾಗಿದೆ:

4. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದ ನಂತರ, ಅರ್ಜಿದಾರರ ಯಾವುದೇ ತಪ್ಪಿಲ್ಲದೆ, ಅವರು ಹುದ್ದೆಯನ್ನು ಕಳೆದುಕೊಂಡಿದ್ದಾರೆ ಎಂಬುದನ್ನು ಈ ನ್ಯಾಯಾಲಯವು ಗಮನಿಸಿದೆ.ಅವರನ್ನು ಅರ್ಹತೆಯ ಆಧಾರದ ಮೇಲೆ ನೌಕರಿಭರ್ತಿ ಮಾಡಿಕೊಳ್ಳಲಾಗಿತ್ತು.6 ನೇ ಪ್ರತಿವಾದಿ ವಿದ್ಯಾರ್ಹತೆಯನ್ನು ಪರಿಗಣಿಸದಿರುವಲ್ಲಿ ನೌಕರಿಭರ್ತಿ ಪ್ರಾಧಿಕಾರವು ತಪ್ಪೆಸಗಿದೆ.ಅರ್ಜಿದಾರರು ಕಳೆದ ಮೂರು ವರ್ಷಗಳಿಂದ ಹಿಂದಿ ಶಿಕ್ಷಕಿಯಾಗಿ ತನ್ನ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಮತ್ತು ಈ ಹಂತದಲ್ಲಿ ಅರ್ಜಿದಾರರ ನೇಮಕಾತಿಯನ್ನು ಬಿಟ್ಟುಬಿಡಲು ನಿರ್ದೇಶಿಸಲಾಗಿದ್ದು, ಇದು ಅವರ ಇಡೀ ಕುಟುಂಬ ಮತ್ತು ಅವರ ವೃತ್ತಿಜೀವನದ ಮೇಲೆ ಪರಿಣಾಮ ಬೀರುತ್ತದೆ.ಸಂಗತಿಗಳ ತಪ್ಪು ನಿರೂಪಣೆಯಿಂದ ಅರ್ಜಿದಾರರು ನೇಮಕಾತಿ ಪಡೆದುಕೊಂಡಿದ್ದರೆ, ನಾವು ಹಸ್ತಕ್ಷೇಪ ಮಾಡುತ್ತಿರಲಿಲ್ಲ.ಪ್ರಸ್ತುತ ಮೊಕದ್ದಮೆಯಲ್ಲಿ, ಅರ್ಜಿದಾರರ ಕಡೆಯಿಂದ ಅಂಥ ಯಾವುದೇ ತಪ್ಪು ನಿರೂಪಣೆಯಾಗಿರುವುದಿಲ್ಲ.ಹಾಗಾಗಿ, ಈ ಹಿನ್ನೆಲೆಯಲ್ಲಿ, ಹಿಂದಿ ಶಿಕ್ಷಕರ ಹುದ್ದೆಗೆ II-ಬಿ ಪ್ರವರ್ಗದ ಅಡಿಯಲ್ಲಿ ಯಾವುದಾದರೂ ಖಾಲಿ ಸ್ಥಾನ ಲಭ್ಯವಿದೆಯೇ ಎಂಬುದನ್ನು ಕಂಡುಕೊಳ್ಳಲು ನಾವು ಸರ್ಕಾರಿ ವಕೀಲರಿಗೆ ನಿರ್ದೇಶಿಸುತ್ತೇವೆ ಮತ್ತು II-ಬಿ ಪ್ರವರ್ಗದ ಅಡಿಯಲ್ಲಿ ಅಂಥ ಖಾಲಿಸ್ಥಾನಗಳು ಲಭ್ಯವಿದ್ದರೆ ಮತ್ತು ಅರ್ಜಿದಾರರನ್ನು ಅಂಥ ಪ್ರಸ್ತುತ ಖಾಲಿ ಸ್ಥಾನಕ್ಕೆ ನಿಯೋಜಿಸಿದರೆ, ಅರ್ಜಿದಾರರಿಗೆ ಯಾವುದೇ ತೊಂದರೆಯಾಗುವುದಿಲ್ಲ.

5. ಈ ಸಂದರ್ಭಗಳ ಹಿನ್ನೆಲೆಯಲ್ಲಿ, ಈ ಅರ್ಜಿಯನ್ನು II-ಬಿ ಪ್ರವರ್ಗದ ಅಡಿಯಲ್ಲಿ ಹಿಂದಿ ಶಿಕ್ಷಕರ ಹುದ್ದೆ ಖಾಲಿ ಇದೆಯೇ ಎಂಬುದನ್ನು ಕಂಡುಕೊಂಡು, ಅಂಥ ಖಾಲಿ ಸ್ಥಾನ ಲಭ್ಯವಿದ್ದರೆ, ಸದರಿ ಹುದ್ದೆಗೆ ಅರ್ಜಿದಾರರ

ಪ್ರಕರಣವನ್ನು ಪರಿಗಣಿಸಲು ಮತ್ತು ಅವರ ಸೇವೆಗೆ ಯಾವುದೇ ಭಂಗ ತರದೆ ಮುಂದುವರಿಸುವಂತೆ ಸರ್ಕಾರಕ್ಕೆ ನಿರ್ದೇಶಿಸುವುದರೊಂದಿಗೆ ಈ ಅರ್ಜಿಯನ್ನು ವಿಲೇ ಮಾಡಲಾಗಿದೆ. "

27. ಸರ್ವೋಚ್ಚ ನ್ಯಾಯಾಲಯದ ಮೇಲೆ ಉದ್ಧರಿಸಿದ ಮತ್ತು ಈ ನ್ಯಾಯಾಲಯದ ಚ ಮಾನ್ಯ ವಿಭಾಗೀಯ ಪೀಠದ ತೀರ್ಪುಗಳನ್ನವಲಂಬಿಸಿ, 3 ನೇ ಪ್ರತಿವಾದಿಯ ನೇಮಕಾತಿಗೆ ಇಷ್ಟು ದೀರ್ಘಾವಧಿ ಸೇವೆ ಸಲ್ಲಿಸಿದ ನಂತರ ಅಡ್ಡಿಯನ್ನುಂಟು ಮಾಡಬಾರದೆಂದು 3 ನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು ವಾದ ಮಂಡಿಸಿದ್ದಾರೆ.ಮೇಲೆ ಹೇಳಿದ ತೀರ್ಪುಗಳು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಹೊಂದಿಕೆಯಾಗುತ್ತಿದ್ದು ಅವುಗಳನ್ನು ಅನುಸರಿಸಬೇಕಾದ ಅಗತ್ಯವಿದೆಯೆಂದು ಅವರು ನಿವೇದಿಸಿಕೊಂಡಿದ್ದಾರೆ.3 ನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಯ ನಿವೇದನೆಯನ್ನು ಒಪ್ಪಿಕೊಂಡು ಮೊಕದ್ದಮೆಯ ಸಂಗತಿಗಳ ಕಡೆಗೆ ಗಮನ ಹರಿಸದೆ ಇರುವುದು, ಹರಿಯಾಣ ಹಣಕಾಸು ನಿಗಮ ಮತ್ತು ಇನ್ನೊಬ್ಬರು ವಿರುದ್ಧ ಜಗದಂಬಾ ಆಯಿಲ್ ಮಿಲ್ಸ್ ಮತ್ತು ಇನ್ನೊಬ್ಬರು ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ನಿಯಮಕ್ಕೆ ವಿರುದ್ಧವಾಗುವುದು.ಅದರಲ್ಲಿನ 20 ರಿಂದ 22 ನೇ ಕಂಡಿಕೆಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

"20. ಹೋಮ್ ಆಫೀಸ್ -ವಿರುದ್ಧ-ಡಾರ್ಸೆಟ್ ಯಾಚ್ ಕಂಪನಿ (1970) 2 ಎಎಲ್ಎಲ್ ಇಆರ್ 294:1970 ಎಸಿ 1004 (ಹೆಚ್ಎಲ್)) ಮೊಕದ್ದಮೆಯಲ್ಲಿ, ಮಾನ್ಯ ರೀಡ್ ಅವರು, ಹೀಗೆ ಹೇಳಿದ್ದಾರೆ (ಎಎಲ್ಲ್ ಇಆರ್ ಪುಟ 297 ಜಿ-ಹೆಚ್): "ಮಾನ್ಯ ಅಟ್ಕೆನ್ರವರ ಮಾತಿನಲ್ಲಿ ಅದನ್ನು ಶಾಸನಾತ್ಮಕ ಪರಿಭಾಷೆ ಆಗಿದ್ದರೆ ಹೇಗೋ ಹಾಗೆ ಎಂಬಂತೆ ಪರಿಗಣಿಸಬಾರದು.ಹೊಸ ಸಂದರ್ಭಗಳಲ್ಲಿ ಅದಕ್ಕೆ ಅರ್ಹತೆಯ ಅಗತ್ಯವಿದೆ." ನ್ಯಾಯಮೂರ್ತಿ ಮೆಗರಿ ಅವರು (1971) 1 ಡಬ್ಲ್ಯುಎಲ್ಆರ್ 1062 ರಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದಾರೆ: "ಸಹಜವಾಗಿಯೇ, ಯಾರೇ ಆಗಲಿ, ರಸೆಲ್ ಅವರ ಕಾಯ್ದಿರಿಸಿದ ತೀರ್ಪನ್ನು ಸಹ, ಸಂಸತ್ತಿನ ಅಧಿನಿಯಮವೆಂಬಂತೆ ಅರ್ಥೈಸಬಾರದು. "ಮತ್ತು ಹೆರಿಂಗ್ಟನ್ -ವಿರುದ್ಧ-ಬ್ರಿಟೀಷ್ ರೈಲ್ವೇ ಬೋರ್ಡ್ [ (1972) 2 ಡಬ್ಲ್ಯುಎಲ್ಆರ್ 537 [ಸಬ್ ನಾಮ್ ಬ್ರಿಟೀಷ್ ರೈಲ್ವೇ ಬೋರ್ಡ್ -ವಿರುದ್ಧ-ಹೆರಿಂಗ್ಟನ್, (1972) 1 ಎಎಲ್ಲ್ ಇಆರ್ 749 (ಹೆಚ್ಎಲ್)] ರಲ್ಲಿ, ಮಾನ್ಯ ಮೋರಿಸ್ ಅವರು ಹೀಗೆ ಹೇಳಿದ್ದಾರೆ:(ಎಎಲ್ಎಲ್ ಇಆರ್ ಪುಟ 761 ಸಿ)

' ಮಾತಿನ ಪದಗಳನ್ನು ಅಥವಾ ತೀರ್ಪುಗಳನ್ನು, ಅವು ವಿಧಾಯೀ ಶಾಸನದಲ್ಲಿನ ಪದಗಳೆಂಬಂತೆ ಪರಿಗಣಿಸುವ ಅಪಾಯ ಸದಾ ಇರುತ್ತದೆ ಮತ್ತು ನ್ಯಾಯಿಕ ಉಕ್ತಿಗಳನ್ನು ಒಂದು ನಿರ್ದಿಷ್ಟ ಮೊಕದ್ದಮೆಯ ಸ ಂ ಗತಿಗಳ ಸನ್ನಿವೇಶದಲ್ಲಿ ಹೇಳಲಾಗಿರುತ್ತದೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.

21. ಸಾಂದರ್ಭಿಕ ಹೊ ಂ ದಾಣಿಕೆಯು, ಒಂದು ಹೆಚ್ಚುವರಿ ಅಥವಾ ವಿಭಿನ್ನ ಸಂಗತಿಯು ಎರಡು ಮೊಕದ್ದಮೆಗಳಲ್ಲಿನ ಅಶೋಕ್ ಕುಮಾರ್ -ವಿರುದ್ಧ ಕರ್ನಾಟಕ ಸರ್ಕಾರ ಮತ್ತು ಇತರರು 41 ನಿರ್ಣಯಗಳ ನಡುವೆ ವ್ಯತ್ಯಾಸವನ್ನುಂಟು ಮಾಡಬಹುದು.ನಿರ್ಣಯವನ್ನವಲಂಬಿಸಿ ಕಣ್ಣು ಮುಚ್ಚಿಕೊಂಡು ಮೊಕದ್ದಮೆಗಳನ್ನು ವಿಲೆ ಮಾಡುವುದು ಸೂಕ್ತವಲ್ಲ.

22. ಪೂರ್ವನಿದರ್ಶನಗಳನ್ನು ಅನ್ವಯಿಸುವ ವಿಷಯದಲ್ಲಿ ಅ ನ್ಯಾಯಮೂರ್ತಿ ಹಿದಾಯತುಲ್ಲಾ ಅವರ ಮುಂದಿನ ಮಾತುಗಳು ಪ್ರಸಿದ್ಧ ಪ್ರಮಾಣ ವಾಕ್ಯವಾಗಿದೆ:(ಅಬ್ದುಲ್ ಕಯಮ್ -ವಿರುದ್ಧ ಸಿಐಟಿ [ಎಐಆರ್ 1962 ಎಸ್ಸಿ 680], ಎಐಆರ್ ಪುಟ 688, ಕಂಡಿಕೆ 19) $19. ಪ್ರತಿಯೊಂದು ಮೊಕದ್ದಮೆಯು ಅದರದೇ ಆದ ಸಂಗತಿಗಳನ್ನವಲಂಬಿಸಿರುತ್ತದೆ ಮತ್ತು ಒಂದೇ ಒಂದು ಮಹತ್ವದ ವಿವರವು ಇಡೀ ಸಂಗತಿಯನ್ನೇ

ಬದಲಾಯಿಸಬಹುದಾದ್ದರಿ ಂ ದ ಒ ಂ ದಲ್ಲ ಒ ಂ ದು ಮೊಕದ್ದಮೆಗಳ ನಡುವೆ ನಿಕಟ ಹೋಲಿಕೆ ಇರುವುದು ಸಾಕಾಗುವುದಿಲ್ಲ.ಅಂಥ ಮೊಕದ್ದಮೆಗಳನ್ನು ಕುರಿತು ನಿರ್ಧರಿಸುವಲ್ಲಿ, ಯಾರೇ ಆಗಲಿ ಒಂದು ಮೊಕದ್ದಮೆಯ ಸನ್ನಿವೇಶವನ್ನು ಇನ್ನೊಂದು ಮೊಕದ್ದಮೆಯ ಸನ್ನಿವೇಶ ದೊ ಂ ದಿಗೆ ಸರಿಹೊ ಂ ದಿಸುವ ಮೂಲಕ (ಕಾರ್ಡೋಜೋ, ಹೇಳಿರುವಂತೆ) ಮೊಕದ್ದಮೆಗಳನ್ನು ನಿರ್ಧರಿಸುವ ವ್ಯಾಮೋಹದಿಂದ ತಪ್ಪಿಸಿಕೊಳ್ಳಬೇಕಾಗುತ್ತದೆ.ಆದುದರಿಂದ, ಮೊಕದ್ದಮೆಯು ಯಾವ ಕಡೆ ವಾಲುತ್ತದೆ ಎ ಂ ಬ ಂ ದ ನ ನಿರ್ಧರಿಸಲು, ಮತ್ತೊ ಂ ದು ಮೊಕದ್ದ‌ದ ವೆ ಂಂ ದಿಗಿನ ಸ್ಥೂಲ ಸಾದೃಶ್ಯವು ನಿರ್ಣಾಯಕವಾಗುವುದಿಲ್ಲ.' ನ್ಯಾಯದ ಪಥವನ್ನು ಪೂರ್ವನಿದರ್ಶನವು ಗುರುತಿಸುವಷ್ಟರಮಟ್ಟಿಗೆ ಮಾತ್ರವೇ ಅದನ್ನು ಅನುಸರಿಸಬೇಕೇ ಹೊರತು, ನೀವು ಅದರ ಅನಗತ್ಯ ಭಾಗಗಳನ್ನು ಕೈಬಿಟ್ಟು ಬ್ ಕಾ ದ ಭಾಗಗಳನ ಮಾತ್ರ ಆ ಂ ಮಾಡಿಕೊಳ್ಳಬೇಕಾಗುತ್ತದೆ, ಇಲ್ಲದೇ ಹೋದಲ್ಲಿ, ನೀವು ಪೂರ್ವನಿದರ್ಶನಗಳ ರಾಶಿಯಲ್ಲಿ ಸ್ವತಃ ಕಳೆದುಹೋಗುವಿರಿ.ನ್ಯಾಯದ ಹಾದಿಯಲ್ಲಿ ಅಡಚಣೆಯುಂಟು ಮಾಡುವ ಅ ಅಡೆ ತಡೆಗಳನ್ನು ಸರಿಸಿ ನ್ಯಾ ಂ ತ ಪಥ ವನ್ನು ಸ್ಪಷ್ಟವಾಗಿರಿಸಿಕೊಳ್ಳಬೇಕೆಂಬುದು ನನ್ನ ಪ್ರಾರ್ಥನೆ. " ಮೇಲೆ ಉದ್ಧರಿಸಿದ ತೀರ್ಪಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ಕಾನೂನಿನ ನಿಬಂಧನೆಗನುಸಾರವಾಗಿ, 3 ನೇ ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ಎರಡೂ ಮೊಕದ್ದಮೆಗಳ ಸಂಗತಿಗಳನ್ನು ಗಮನಿಸಬೇಕಾಗದ ಅಗತ್ಯವಿದೆ.

28. ಪರಮಾನಂದ ಮೊಕದ್ದಮೆಯಲ್ಲಿನ (ಮೇಲೆ ಹೇಳಿದ) ಸಂಗತಿಗಳೆಂದರೆ, ಮೂಲ ದಸ್ತಾವೇಜುಗಳು ಸಂಸ್ಥೆಯಲ್ಲಿದ್ದುದರಿಂದ ಮತ್ತು ಅದರಲ್ಲಿನ ಮೇಲ್ಮನವಿದಾರರು ಸೂಕ್ತ ಸಮಯದಲ್ಲಿ ಅವುಗಳನ್ನು ಹಾಜರುಪಡಿಸುವ ಸ್ಥಿತಿಯಲ್ಲಿ ಇಲ್ಲದ್ದರಿಂದ ಅವುಗಳನ್ನು ಹಾಜರುಪಡಿಸಿಲ್ಲ ಹಾಗೂ 6 ನೇ ಪ್ರತಿವಾದಿಯು ತಮ್ಮ ಕೆಲಸವನ್ನು ಮುಂದುವರಿಸಿದ್ದರು ಎಂಬುದಾಗಿವೆ.ಅಂಥ ಸಂದರ್ಭಗಳಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೇಮಕಾತಿ ಪಡೆದವರನ್ನು ಮುಂದುವರೆಸಲು ಚ ನಿರ್ದೇಶಿಸಿತು ಹಾಗೂ ಆ ಮೊಕದ್ದಮೆಯಲ್ಲಿ, ಯಾವುದೇ ಖಾಲಿ ಸ್ಥಾನವಿದ್ದರೆ, ಮೇಲ್ಮನವಿದಾರರಿಗೆ ಸಹ ಅವಕಾಶ ಮಾಡಿಕೊಡಬೇಕೆಂದು ನಿರ್ದೇಶಿಸಿತು.ಹಾಗಾಗಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದಿರುವ ಸ ಂ ಗತಿಗಳು, ಚ ಸರಿಪಡಿಸಬಹುದಾಗಿದ್ದಂಥ ನಿರ್ದಿಷ್ಟ ದೋಷವನ್ನವಲಂಬಿಸಿದ ಆಯ್ಕೆಯಲ್ಲಿನ ಲೋಪವನ್ನು ಕುರಿತಾಗಿದ್ದವೇ ಹೊರತು ಮೋಸವನ್ನಲ್ಲ.

29. ಮುಂದಿನ ತೀರ್ಪು, ಮಾನ್ಯ ವಿಭಾಗೀಯ ಪೀಠವು ಶ್ರೀಮತಿ ತಸ್ಲಿಮಾ (ಮೇಲೆ ಹೇಳದ) ಮೊಕದ್ದಮೆಯಲ್ಲಿ ನೀಡಿದ್ದಾಗಿದೆ.ಅದರಲ್ಲಿನ ಅರ್ಜಿದಾರರನ್ನು ಅರ್ಹತೆಯ ಆಧಾರದ ಮೇಲೆ ನೌಕರಿ ಭರ್ತಿ ಮಾಡಿಕೊಳ್ಳಲಾಗಿತ್ತು; ನೌಕರಿಭರ್ತಿ ಪ್ರಾಧಿಕಾರವು ಅವರ 6 ನೇ ಪ್ರತಿವಾದಿಯ ಸ್ವವಿವರಗಳಿಗೆ ಸಂಬಂಧಿಸಿದ ವಿದ್ಯಾರ್ಹತೆಗಳನ್ನು ಪರಿಗಣಿಸದಿರುವ ತಪ್ಪನ್ನು ಎಸಗಿದ್ದು, ಅದರಲ್ಲಿನ ಅರ್ಜಿದಾರರ ನಿಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದಿಲ್ಲ ಎಂಬುದು ಮಾನ್ಯ ವಿಭಾಗೀಯ ಪೀಠದ ನಿರ್ಣಯವಾಗಿದೆ.ಸಂಗತಿಗಳ ತಪ್ಪು ನಿರೂಪಣೆಯಿಂದ ಪಡೆದಿದ್ದ ನೇಮಕಾತಿಯಲ್ಲಿ ಹಸ್ತಕ್ಷೇಪ ಮಾಡಬೇಕೆಂಬುದಾಗಿ ಮಾನ್ಯ ವಿಭಾಗೀಯ ಪೀಠವು ನೇರವಾಗಿ ಅಭಿಪ್ರಾಯಪಟ್ಟಿದೆ.ಹಾಗಾಗಿ, ಶ್ರೀಮತಿ ತಮಾ (ಮೇಲೆ ಹೇಳಿದ) ಮೊಕದ್ದಮೆಯಲ್ಲಿನ ಮಾನ್ಯ ವಿಭಾಗೀಯ ಪೀಠದ ತೀರ್ಪು ಸಹ ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

ನೇಮಕಾತಿಯನ್ನು ಉಳಿಸಲು 3 ನೇ ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ತೀರ್ಪುಗಳು, ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ ಸಹಾಯಕವಾಗುವುದಿಲ್ಲ.

30. 3 ನೇ ಪ್ರತಿವಾದಿಗಳು, ಆಯ್ಕೆ ಪ್ರಾಧಿಕಾರವು ಎಸಗಿದ ಮೋಸದ ನೇರ ಫಲಾನುಭವಿಯಾಗಿರುವರು.ಈ ಸ್ವರೂಪದ ಮೋಸದ ಸಂದರ್ಭದಲ್ಲಿ, 3 ನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು ಮಾಡಿಕೊಂಡ ನಿವೇದನೆಯನ್ನು ನಾವು ಒಪ್ಪಿಕೊಂಡಲ್ಲಿ, ಅದು ಯುಕ್ತವಲ್ಲದ ಸಹಾನುಭೂತಿಯಾಗುವುದು ಮತ್ತು ಅಂಥ ಸಹಾನುಭೂತಿಗೆ ಒಪ್ಪಿಕೊಂಡರೆ, ಅದು ಕಾನೂನಿನ ನಿಷ್ಪಕ್ಷಪಾತವಾದ ತರ್ಕವನ್ನು ವಿಫಲಗೊಳಿಸುವುದು.ಕಾನೂನಿನಲ್ಲಿನ ಹಕ್ಕನ್ನು ಪಡೆಯಲು ಒಬ್ಬ ವ್ಯಕ್ತಿಯು ಅರ್ಹನಾಗಿರದಿದ್ದರೆ, ಆತನಿಗೆ ಅಂಥ ಹಕ್ಕನ್ನು ಅಲ್ಲಗಳೆಯುವ ಪರಿಣಾಮವು ನ್ಯಾಯಾಲಯಗಳ ಕೇಶಗಳಾಗುವುದಿಲ್ಲ.ಕಾನೂನನ್ನು ಜಾರಿಗೊಳಿಸಲು ನ್ಯಾಯಾಲಯಗಳಿರುತ್ತವೆಯೇ ಹೊರತು, ಕಾನೂನಿಗೆ ಭಂಗ ತರಲು ಅಥವಾ ಕಾನೂನುಬಾಹಿರತೆಯನ್ನು ಶಾಶ್ವತಗೊಳಿಸಲು ಅಲ್ಲ. ನ್ಯಾಯಾಲಯಗಳ ಮುಂದಿರುವ ಮೊಕದ್ದಮೆಯ ವಿಲೆಯಲ್ಲಿನ ವಿಳಂಬವು, ಪ್ರಾರಂಭದಿಂದಲೇ ಕಾನೂನು ಬಾಹಿರವಾಗಿದ್ದಂಥ ನೇಮಕಾತಿಯನ್ನು ಉಳಿಸಲು ಕಾರಣವಾಗುವುದಿಲ್ಲ.ನ್ಯಾಯಾಲಯಗಳಿಗೆ ಕಾನೂನು ಎಷ್ಟೇ ಅನನುಕೂಲವಾಗಿ ಕಂಡುಬಂದರೂ, ಅವು ಅದನ್ನು ನಿರ್ವಹಿಸಲೆಂದೇ ಇರುತ್ತವೆ.

31. ರಾಜ್ಯವು ಆಯ್ಕೆಯನ್ನು ನಡೆಸಿದೆ.ಸರ್ಕಾರಿ ಹುದ್ದೆಯಲ್ಲಿರುವ ದೊಡ್ಡವರು ಮತ್ತು ಸಣ್ಣವರಿಬರಿಗೂ ವಹಿಸಿದ ಹುದ್ದೆಗಳು ಪಾವಿತ್ರ್ಯತೆಯ ಜವಾಬ್ದಾರಿಗಳಾಗಿರುತ್ತವೆ ಎಂಬುದನ್ನು ಅವರು ಮರೆತಿರುವುರೆಂಬುದು ಅತ್ಯಂತ ವಿಷಾದನೀಯ.ಅಂಥ ಹುದ್ದೆಗಳನ್ನು ಉಪಯೋಗಕ್ಕಾಗಿ ಸೃಜಿಸಲಾಗಿದೆಯೋ ಹೊರತು ದುರುಪಯೋಗಕ್ಕಲ್ಲ.3 ನೇ ಪ್ರತಿವಾದಿಯ ನೇಮಕಾತಿಯು ಬಾಹ್ಯ ಪರಿಗಣನೆಗಳ ಮೂಲಕ ಪ್ರೇರಿತವಾಗಿತ್ತು ಎಂದು ಊಹೆ ಮಾಡುವುದು ನಮಗೆ ಅತಿ ಎನಿಸಲಾರದು.ಆಯ್ಕೆ ಸಮಿತಿಯಿಂದಾದ ಈ ಸ್ವರೂಪದ ಕೃತ್ಯಗಳು ಕಾನೂನಿನಲ್ಲಿ ಊಹಿಸಲಾಗದವುಗಳಾಗಿವೆ.3 ನೇ ಪ್ರತಿವಾದಿಗಳ ನೇಮಕಾತಿಯು ಮೋಸದಿಂದ ರೂಪು ತಳೆದು ಸಂಚಿನಲ್ಲಿ ಪರಿಣಮಿಸಿದೆ ಎಂಬುದು ದೂರನ್ನು ಮೀರಿದುದಾಗಿದೆ.ಈ ಸ್ವರೂಪದ ಮೊಕದ್ದಮೆಗಳಲ್ಲಿ, ಮೋಸವು ಎಲ್ಲವನ್ನೂ ಬಿಚ್ಚಿಡುತ್ತದೆ " ಎಂಬುದು ಸಾಮಾನ್ಯ ನಿಯಮವಾಗಿರುವುದರಿಂದ ಮತ್ತು ಪ್ರತಿಯೊಂದು ಶ್ರದ್ಧಾಪೂರ್ವಕ ಕೃತ್ಯವನ್ನು ನಿರರ್ಥಕಗೊಳಿಸುತ್ತದೆಯಾದ್ದರಿಂದ, 3 ನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು ಕ್ಷೇಮು ಮಾಡಿದಂತೆ, ವ್ಯಕ್ತಿಗತ ನಿರಪರಾಧಿತ್ವಕ್ಕೆ ಯಾವುದೇ ಸ್ಥಳವಿಲ್ಲ.

32. ಸಾಮಾನ್ಯ ಸಂದರ್ಭಗಳಲ್ಲಿ, ಮೋಸದಿಂದ ಪಡೆದ ನೇಮಕಾತಿಯಲ್ಲಿ, ಈ ನ್ಯಾಯಾಲಯವು, ಈ ಅನ್ಯಾಯದಿಂದ ಪಡೆದ ಲಾಭಗಳ ಪ್ರಯೋಜನಗಳನ್ನು ಹಿಂತಿರುಗಿಸಲು ಅವರನ್ನು ಅಗತ್ಯಪಡಿಸುತ್ತದೆಯಾದರೂ, 3 ನೇ ಪ್ರತಿವಾದಿಗಳು ಕಾರನಿರ್ವಹಿಸಿದ್ದು, ಕಳೆದ ಹತ್ತು ವರ್ಷಗಳ ಕಾಲ ಪಡೆದುಕೊಂಡಿರುವುದರಿಂದ ಸಹಾನುಭೂತಿಯ ಒಂದು ಅಂಶವನ್ನು ಇಲ್ಲಿ ತೋರಿಸಲೇಬೇಕಾಗುತ್ತದೆ, ಈಗ ಎಲ್ಲಾ ವೇತನವನ್ನು ವಸೂಲು ಮಾಡಲು ನಿರ್ದೇಶಿಸುವುದು ಸೂಕ್ತವಾಗುವುದಿಲ್ಲ.ಆದ್ದರಿಂದ, ವೇತನದ ಯಾವುದೇ ವಸೂಲಾತಿಗೆ ಆದೇಶ ನೀಡಲು ನಾವು ಸಮ್ಮತಿಸುವುದಿಲ್ಲ. ತದನುಸಾರವಾಗಿ, 3 ನೇ ಅಂಶಕ್ಕೆ ನಾವು ಉತ್ತರಿಸಿದ್ದು, 3 ನೇ ಪ್ರತಿವಾದಿ ನೇಮಕಾತಿ ಪಡೆದ ವ್ಯಕ್ತಿಯು ಸಹಾಯಕ ಸರ್ಕಾರಿ ಅಭಿಯೋಜಕರು-ಮತ್ತು ಸಹಾಯಕ ಸರ್ಕಾರಿ ನ್ಯಾಯವಾದಿ ಹುದ್ದೆಯಲ್ಲಿ ಮುಂದುವರಿಯುವ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲವೆಂದು ಘೋಷಿಸುತ್ತೇವೆ.

33. ಹಿಂದೆ ಹೇಳಿದ ಕಾರಣಗಳಿಗಾಗಿ, ನಾವು ಈ ಮುಂದಿನ ಆದೇಶವನ್ನು ಹೊರಡಿಸುತ್ತೇವೆ:

( 1) ಅರ್ಹತೆ ಇಲ್ಲದಿರುವುದರಿಂದ, ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.

( 1) ಅರ್ಜಿದಾರರಿಗೆ ಪರಿಹಾರ ಮೊತ್ತವನ್ನು ಸಂದಾಯ ಮಾಡಲು ಮತ್ತು ನಂತರ, ಯುಕ್ತ ಸಮಯದಲ್ಲಿ ಅಂಥ 0 ಮೋಸದ ಅಪಕೃತ್ಯಕ್ಕೆ ಹೊಣೆಗಾರರಾಗಿರುವ ಕಾರನಿರ್ವಹಿಸುತ್ತಿದ ಅಧಿಕಾರಿಗಳನ್ನು ಗುರುತಿಸಿ, ವಿಚಾರಣೆ ನಡೆಸಿ, ಕಾನೂನಿನ ಯುಕ್ತ ಕ್ರಮವನ್ನು ಅನುಸರಿಸಿ, ಅವರ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಿ, ಹಾಗೆ ಗುರುತಿಸಲಾದ ಆ ಅಧಿಕಾರಿಗಳಿಂದ ಅದನ್ನು ವಸೂಲು ಮಾಡಲು 1 ನೇ ಪ್ರತಿವಾದಿಗಳಿಗೆ ನಿರ್ದೇಶಿಸುವುದರೊಂದಿಗೆ, ಅರ್ಜಿದಾರರಿಗೆ 1 ನೇ ಪ್ರತಿವಾದಿಯು 10.00 ಲಕ್ಷ ರೂ.ಗಳ ವೆಚ್ಚ ಸಂದಾಯ ಮಾಡಲು ನಿರ್ದೇಶಿಸಿ, ಅರ್ಜಿಸಂಖ್ಯೆ: ಚ 4005/2010 ರಲ್ಲಿ ಹೊರಡಿಸಿದದಿನಾಂಕ: 24.10.2019 ರ ನ್ಯಾಯ ಮಂಡಳಿಯ ಆದೇಶವನ್ನು ಮಾರ್ಪಡಿಸಲಾಗಿದೆ.

(iii) ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಯ ಒಳಗಾಗಿ ಸರ್ಕಾರವು ಈ ಕಾರ್ಯವನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಆ ಮಟ್ಟಿಗೆ ಅನುಪಾಲನಾ ವರದಿಯನ್ನು ಈ ನ್ಯಾಯಾಲಯಯಕ್ಕೆ ಸಲ್ಲಿಸಕ್ಕದ್ದು.

(iv) ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ನಾಲ್ಕು ತಿಂಗಳುಗಳ ಅವಧಿಯ ಒಳಗಾಗಿ ಸಹಾಯಕ ಸರ್ಕಾರಿ ಅಭಿಯೋಜಕರು-ಮತ್ತು-ಸಹಾಯಕ ಸರ್ಕಾರಿ ನ್ಯಾಯವಾದಿಗಳ ಹುದ್ದೆಗೆ ಅರ್ಜಿದಾರರ ಅಭ್ಯರ್ಥಿತನವನ್ನು ಪರಿಗಣಿಸಲು 1 ನೇ ಮತ್ತು 2 ನೇ ಪ್ರತಿವಾದಿಗಳಿಗೆ ನಿರ್ದೇಶಿಸಲಾಗಿದೆ.

( v) ಇತ್ಯರ್ಥದಲ್ಲಿರುವ ಎಲ್ಲಾ ಅರ್ಜಿಗಳು ಪರಿಗಣನೆಗೆ ಉಳಿಯುವುದಿಲ್ಲ.ತದನುಸಾರವಾಗಿ ಅವುಗಳನ್ನು ವಿಲೇ ಮಾಡಲಾಗಿದೆ.

(vi) ಈ ಆದೇಶದ ಪ್ರತಿಯನ್ನು ಪ್ರಧಾನ ಕಾರ್ಯದರ್ಶಿ, ಒಳಾಡಳಿ ತ ಇಲಾಖೆ, ಬೆ ೦ ಗಳೂರು ಇವರಿಗೆ ರವಾನಿಸತಕ್ಕದ್ದು.